ಮಾನುಷಿ

ತಿಂಗಳ ಪತ್ರಿಕೆ ಡಿಸೆಂಬರ್ 1992

★ ರಾಜಕೀಯ ಹೊಂದಾಣಿಕೆಗಳು ಮತ್ತು ಮಹಿಳೆ

★ ಸ್ವಾಯತ್ತ ಮಹಿಳಾ ಸಂಸ್ಥೆಗಳ
ರಾಷ್ಟ್ರೀಯ ಸಮ್ಮೇಳನ

★ ಸಾವಿನ ನೆರಳು

★ ಖಾಲಿತನ

★ ನಾನೊಂದು ದೀಪ

ಮಾನಸ

ಸಂಪುಟ : ೧೨ ಸಂಚಿಕೆ : ೧೨

ಡಿಸೆಂಬರ್ - ೧೯೯೨

ಸಂಪಾದಕೀಯ ಮಂಡಳಿ :

ರಾಜೇಶ್ವರಿ ಎಚ್. ಎಸ್.,
ಚಂಪಾವತಿ ಎಚ್. ಎಸ್., ಸರಸ್ವತಿ ದು.,
ಸವಿತ ಎ., ಗಾಯತ್ರಿ ವಿ.

ಸಲಹೆ-ಸಹಕಾರ

ಇಳಾ ವಿಜಯಾ

ವಿಳಾಸ :

"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು–560 067

ಬಿಡಿ ಪ್ರತಿ : **2 ರೂ.**

ಸೂಚನೆ : ವಾರ್ಷಿಕ ಚಂದಾ : **20 ರೂ.**

ಆಜೀವ ಚಂದಾ : **250 ರೂ.**

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು.

ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ.ಓ.
ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ...

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭



ಸಂಪಾದಕೀಯ

ಸಾಕ್ಷರತೆಯ ಗಾಢ ಪ್ರಭಾವಕ್ಕೊಳಗಾದ ಮಹಿಳೆಯರು ಅಕ್ಷರ ಬರೆಯುವುದನ್ನು ಕಲಿಯುವುದರ ಮೂಲಕ ಶತಮಾನಗಳ ಅಂಧಕಾರದ ಸಂಕೋಲೆಯನ್ನು ಮುರಿದುದು ಮಾತ್ರವಲ್ಲದೆ ಅಕ್ಷರಗಳ ಹಿಂದಿರುವ ರಾಜಕೀಯ ಒಳ ಅರ್ಥವನ್ನು ಬಿಡಿಸಿದ ಒಂದು ಘಟನೆ ಇತ್ತೀಚೆಗೆ ಮಂಡ್ಯದಲ್ಲಿ ನಡೆದಿದೆ,

ಅಕ್ಷರವನ್ನು ಕಲಿತ ಮಹಿಳೆಯರು ಸಾಕ್ಷರತೆಯ ಸೀಮಿತ ವ್ಯಾಪ್ತಿಯ ವೃತ್ತವನ್ನು ದಾಟಿ, ಕುಡಿತ ಹಾವಳಿಯಿಂದ ಕುಟುಂಬಗಳ ರಕ್ಷಣೆಗಾಗಿ ಪ್ರಯತ್ನಿಸಿ ಸಾರಾಯಿ ಅಂಗಡಿಗಳನ್ನು ಅವುಗಳಿಗೆ ಪರವಾನಗಿ ನೀಡುವ ವ್ಯವಸ್ಥೆಯನ್ನು ತಮ್ಮದೇ ಆದ ರೀತಿಯಲ್ಲಿ ಪಶ್ನಿಸತೊಡಗಿದರು. ಹೀಗೆ ಪ್ರಶ್ನಿಸ ತೊಡಗಿದಂತೆ ಸಾಕ್ಷರತೆ ಹಾಗೂ ಸಾರಾಯಿ ಅಂಗಡಿಗಳಿಗೆ ಪರವಾನಗಿ ನೀಡುವ ವ್ಯವಸ್ಥೆಯ ಹಿಂದಿರುವ ಸಾಮ್ಯತೆಯನ್ನು 'ಅಕ್ಷರ'ಗಳು ಪ್ರತಿಬಿಂಬಿಸಿದವು.

ಸರ್ಕಾರದ ಯೋಜನೆಗಳೆಂಬ ಕೊಟ್ಟು ಕಸಿದುಕೊಳ್ಳುವ ಕಣ್ಣುಮುಚ್ಚಾಲೆ ಯಾಟದಲ್ಲಿ ಅನಕ್ಷರಸ್ಥ ಮಹಿಳೆಯರಿಗೆ 'ಅಕ್ಷರ'ದ ಹಿಂದಿರುವ ವ್ಯವಸ್ಥೆಯ ಸ್ವರೂಪದ ಗೂಡಾರ್ಥ ಗೋಚರವಾದದ್ದು ಕಾಕತಾಳೀಯವೇನಲ್ಲ. ಹೆಬ್ಬೆಟ್ಟೊತ್ತುವುದರ ಬದಲಾಗಿ ಮೈಯೆಲ್ಲ ಕೈಯಾಗಿಸಿಕೊಂಡು, ನಡುಗುತ್ತಾ ಸಹಿ ಮಾಡುವುದಕ್ಕಷ್ಟೇ ಸಾಕ್ಷರತೆಯ ಅರ್ಥ ಸೀಮಿತಗೊಂಡಿರುವುದು ಒಂದು ದುರಂತವೇ ಸರಿ. ಮಹಿಳೆಯರು ತಮ್ಮ ಹೆಸರನ್ನು ರುಜು ಮಾಡುವುದನ್ನು ಕಲಿಯುವುದು ಐತಿಹಾಸಿಕವಾಗಿ ಮಹತ್ವದ್ದಾದರೂ ಅಕ್ಷರದ ಹಿಂದಿರುವ ಪಟ್ಟಬದ್ಧ ಹಿತಾಸಕ್ತಿಯ ಸಂಬಂಧದ ಸಂಕೀರ್ಣತೆಯನ್ನು ಮಂಡ್ಯದ ಮಹಿಳೆಯರು ಗುರುತಿಸಿ ಪ್ರಶ್ನಿಸಿರುವುದು ಪ್ರಶಂಸನೀಯ. ಅಕ್ಷರಕ್ಕಾಗಿ ಅಕ್ಷರವೆನ್ನದೆ, ಸರ್ಕಾರದ ಪ್ರಗತಿಯ ಟೊಳ್ಳುಮುಖವಾಡದ ಪ್ರತಿನಿಧಿಯಾಗ ಬಯಸಿದ ಈ ಮಹಿಳೆಯರ ಪಾಲಿಗೆ 'ಅಕ್ಷರ' ನೈಜ ಅರ್ಥದಲ್ಲಿ ಬದುಕನ್ನು ಆವರಿಸಿರುವ ಕತ್ತಲನ್ನು ಕಳೆಯುವ ಬೆಳಕಿನ ದೀವಿಗೆ.

ರಾಚನಿಕ ಹೊಂದಾಣಿಕೆಗಳು ಮತ್ತು ಮಹಿಳೆ

● ಅನುವಾದ : ವಿ. ಗಾಯತ್ರಿ

ಮೂಲ : STRUCTURAL ADJUSTMENT
WHO REALLY PAYS
Issued in public interest by :
'Public Interest Research Group'

ಗೋಧಿ ಮತ್ತು ಅಕ್ಕಿಯ ಕೊಡು ಬೆಲೆಯಲ್ಲಿ ಇತ್ತೀಚೆಗೆ ಉಂಟಾದ ಹೆಚ್ಚಳವು ಅರ್ಥ ವ್ಯವಸ್ಥೆಯಲ್ಲಿನ ಹಣ ದುಬ್ಬರಕ್ಕೆ ಸೃಷ್ಟಿ ಕೊಟ್ಟಿದೆ. ಇದು ಕ್ಯಾಲೋರಿಗಳ ಬಳಕೆಯಲ್ಲಿ ರಾಜ್ಯ–ರಾಜ್ಯಗಳ ನಡುವಿನ ಭಿನ್ನತೆಯನ್ನು ಇನ್ನೂ ಹೆಚ್ಚಿಸಿ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅಪೌಷ್ಟಿಕತೆಯ ಪ್ರಮಾಣವನ್ನು ವಿಪರೀತಗೊಳಿಸುತ್ತದೆ.

ಈಗಾಗಲೇ ಅರ್ಥವ್ಯವಸ್ಥೆಯ ಅಂಚಿನಲ್ಲಿರುವ ನಮ್ಮ ಗ್ರಾಮೀಣ ಮಹಿಳೆಯರು, ರಾಚನಿಕ ಹೊಂದಾಣಿಕೆಯ ಪಾಲಿಸಿಗಳ ಹೊರೆಯ, ದೊಡ್ಡ ಭಾಗವನ್ನು ಹೊತ್ತು ಕೊಳ್ಳುತ್ತಾರೆ. ಆರೋಗ್ಯ ಸೇವೆ, ಮಕ್ಕಳ ಪೋಷಣೆ, ವಯಸ್ಸಾದವರ ಸೇವೆ ಇತ್ಯಾದಿಗಳಲ್ಲಿನ ನೇರ ಕಡಿತದಿಂದ, ಮಹಿಳೆಯರು ಇವುಗಳ ಹೆಚ್ಚಿನ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗುತ್ತದೆ ಎಂಬ ನಿರೀಕ್ಷೆಯಿರುವುದು ಸ್ಪಷ್ಟವಾಗುತ್ತದೆ. ಹಣದುಬ್ಬರದಲ್ಲಿನ ಏರಿಕೆ, ನಿರುದ್ಯೋಗದ ತೀವ್ರತೆ, ಮಜೂರಿಗಳಲ್ಲಿನ ಇಳಿತ ಮತ್ತು ಅವಶ್ಯಕ ವಸ್ತುಗಳ ಮತ್ತು ಸಾರ್ವಜನಿಕ ಸೇವೆಗಳ ಮೇಲಿನ ಸಬ್ಸಿಡಿಯಲ್ಲಿನ ಕಡಿತಗಳಿಂದಾಗಿ ಬಡ ಮಹಿಳೆಯರು ತಮ್ಮ ಕುಟುಂಬಗಳ ದಿನನಿತ್ಯದ ಬದುಕುಳಿಯುವಿಕೆಗೆ ದೊಡ್ಡ ಸಂಕಷ್ಟವನ್ನು ಎದುರಿಸಬೇಕಾಗುತ್ತದೆ. ಶಿಕ್ಷಣಗಳಲ್ಲಿನ ಸೇವೆಗಳಲ್ಲಿ ಕಡಿತವುಂಟಾದಾಗ, ಅದರ ತೀವ್ರತೆ ತಟ್ಟುವುದು ಹೆಚ್ಚಾಗಿ ಮಹಿಳೆಯರಿಗೆ.

ಬಹುತೇಕ ಮೂರನೇ ವಿಶ್ವ ರಾಷ್ಟ್ರಗಳಲ್ಲಿ ಆಹಾರ ಒದಗಿಸುವವರು ಮಹಿಳೆಯರೇ ಆಗಿದ್ದು, ಮಜೂರಿಯಲ್ಲಿನ ಇಳಿತ ಮತ್ತು ಬೆಲೆಯೇರಿಕೆಯಿಂದಾಗಿ ಅವರ ವ್ಯಯ ಶಕ್ತಿ ಕಡಿಮೆಯಾಗುತ್ತದೆ. ಅನೇಕ ಲ್ಯಾಟಿನ್ ಅಮೇರಿಕನ್ ದೇಶಗಳಲ್ಲಿ, 1980ರ ದಶಕದಿಂದೀಚೆಗೆ ಬದುಕಿನ ಮಟ್ಟ ಶೇಕಡ ಐವತ್ತರಷ್ಟು ಬೀಳು ಕಂಡಿದೆ. ಆಹಾರ ಮತ್ತು ವ್ಯವಸಾಯ ಸಂಸ್ಥೆ (FAO)ಯು ಶೇಕಡ 63ರಷ್ಟು ಕುಟುಂಬಗಳಿಗೆ ಅವಶ್ಯವಿರುವಷ್ಟು ಆಹಾರ ಸಿಗುತ್ತಿಲ್ಲ ಎಂದು ಅಂದಾಜು ಮಾಡಿದೆ. ಬೊಲಿವಿಯದಲ್ಲಿ 1984ರ 12 ತಿಂಗಳುಗಳಲ್ಲಿ ಆಹಾರ ಪದಾರ್ಥಗಳ ಬೆಲೆ ಹತ್ತು ಪಟ್ಟು ಏರಿತು. ಆಹಾರದ ಕೊರತೆಯಿದ್ದಾಗ, ಅದರ ಸಮ ಹಂಚಿಕೆಯಾಗುವುದಿಲ್ಲ: ಮಕ್ಕಳು, ವೃದ್ಧರು ಮತ್ತು ಮಹಿಳೆಯರು ಕಡಿಮೆ ತಿನ್ನುತ್ತಾರೆ.

ಮಜೂರಿಯಲ್ಲಿನ ಕಡಿತಗಳೂ ಕೂಡ ಮಹಿಳೆ ಮತ್ತು ಪುರುಷರಿಗೆ ಬೇರೆ ಬೇರೆ ರೀತಿಯಲ್ಲಿ ಅನ್ವಯವಾಗುತ್ತದೆ, ಉದಾಹರಣೆಗೆ, ಬ್ರೆಸಿಲಿಯನ್ ಬಟ್ಟೆ ಗಿರಣಿಯಲ್ಲಿ, ವಾರ್ಷಿಕ ಸಂಬಳ ಏರಿಕೆಗೆ ಮುನ್ನ ಮಹಿಳಾ ಕೆಲಸಗಾರರನ್ನು ಕೆಲಸದಿಂದ ತೆಗೆದುಹಾಕಿ ಮತ್ತೆ ಕಡಿಮೆ ಸಂಬಳಕ್ಕೆ ನೇಮಿಸಿಕೊಳ್ಳಲಾಯಿತು. ಜಮೈಕಾದಲ್ಲಿ, ರಫ್ತಿನಿಂದ ಬಂದ ವಿದೇಶೀ ಹಣದ ಶೇಕಡ 50ರಷ್ಟು ಭಾಗವು IMF ಸಾಲಕ್ಕಾಗಿಯೇ ಸರಿಹೊಂದಿಬಿಟ್ಟಾಗ, ಮಹಿಳೆ

ಮಗಳು ಮತ್ತು ತಾಯಿ

ಮಗಳೇ ?

ಏನಮ್ಮ ?

ಮಹಿಳೆಯರ ಬಡತನವನ್ನು ಮಾರುಕಟ್ಟೆ ಹೇಗೆ ಕೊನೆಗೊಳಿಸುತ್ತದಮ್ಮಾ ?

ಅಮ್ಮಾ, ತುಂಬಾ ಸುಲಭ. ಬಡತನಕ್ಕೆ ಕಾರಣವಾದ ಮಹಿಳೆಯರನ್ನೇ ಅದು ಕೊನೆಗೊಳಿಸುತ್ತದೆ. ಹೀಗೆ ಮಹಿಳೆಯರೂ ಇರುವುದಿಲ್ಲ. ಬಡತನವೂ ಇರುವುದಿಲ್ಲ.

ಯರ ನಿರುದ್ಯೋಗವು ಶೇಕಡ 37ಕ್ಕೆ ತಲುಪಿತು– ಪುರುಷರಿಗೆ ಎರಡರಷ್ಟು.

ಲ್ಯಾಟಿನ್ ಅಮೇರಿಕಾದ ಮತ್ತು ಏಷ್ಯಾದ ನಗರಗಳಲ್ಲಿ ಹೆಚ್ಚೆಚ್ಚು ಮಹಿಳೆಯರು, ಹಾದಿ ಬದಿಯ ವ್ಯಾಪಾರಗಳು, ಮನೆಕೆಲಸಗಳು, ದಿನಗೂಲಿ ಮತ್ತು ಕಾಲ ಕಾಲಕ್ಕೆ ಸಿಗುವ ಕೂಲಿ ಮುಂತಾದ "ಅಸಂಘಟಿತ ಅರ್ಥ ವ್ಯವಸ್ಥೆ"ಗೆ ಒತ್ತಾಯ ಪೂರ್ವಕವಾಗಿ ತಳ್ಳಲ್ಪಟ್ಟಿದ್ದಾರೆ. ಅಸಂಘಟಿತ ವಲಯಗಳಿಗೆ ಯೂನಿಯನ್‌ಗಳಿಂದಾಗಲೀ ಅಥವಾ

SAPS (ರಾಚನಿಕ ಹೊಂದಾಣಿಕೆ)ಗಳು ಮಹಿಳೆಯರ ಮೇಲೆ ಹೇಗೆ ಪರಿಣಾಮ ಬೀರುತ್ತವೆ?

ಆರೋಗ್ಯ ಸೇವೆಗಳಲ್ಲಿ ಕಡಿತ: ಇದು ಮಹಿಳೆಯರ ಮೇಲೆ ಅನೇಕ ರೀತಿಯಲ್ಲಿ ಪರಿಣಾಮ ಬೀರುತ್ತದೆ :–

ಎ. ಆಹಾರ ಸೇವೆಗಳಲ್ಲಿ ಕಡಿಮೆ ಸಂಬಳದ ನೌಕರಿಗಳಲ್ಲಿರುವವರೆಲ್ಲ ಮಹಿಳೆಯರೇ ಆದ್ದರಿಂದ ಆರೋಗ್ಯ ಸೇವೆಗಳಲ್ಲಿ ಕಡಿತ ಉಂಟಾದಾಗ ಅವರು ತಮ್ಮ ಕೆಲಸಗಳನ್ನು ಕಳೆದುಕೊಳ್ಳುತ್ತಾರೆ.

ಬಿ. ಸರ್ಕಾರಿ ಆಸ್ಪತ್ರೆಗಳಲ್ಲಿನ ಸೇವೆ ಸಾಕಷ್ಟು ಇಲ್ಲದೇ ಹೋದಾಗ ಮತ್ತು ಖಾಸಗಿ ಆಸ್ಪತ್ರೆಗಳು ತುಂಬಾ ದುಬಾರಿಯಾಗಿರುವಾಗ ಕುಟುಂಬದಲ್ಲಿ ಕಾಯಿಲೆಯಿರುವವರು ಮತ್ತು ವಯಸ್ಸಾದವರನ್ನು ನೋಡಿಕೊಳ್ಳುವಂತೆ ಮಹಿಳೆಯರನ್ನೇ ನಿರೀಕ್ಷಿಸ ಲಾಗುತ್ತದೆ.

ಸಿ. ಮಹಿಳೆಯರಿಗೆ ಮಕ್ಕಳಿರುವುದರಿಂದ ಅವರು ಆರೋಗ್ಯ ಸೇವೆಗಳನ್ನು ಹೆಚ್ಚು ಬಳಸುತ್ತಾರೆ.

ಸಾರ್ವಜನಿಕ ಸೇವೆಗಳಲ್ಲಿ ಕಡಿತ

ಎ. ಮಹಿಳೆಯರಲ್ಲಿ ಆರ್ಥಿಕ ಸ್ವಾವಲಂಬನೆ ಅಪ ರೂಪವಾಗಿರುವಾಗ, ಅವರಿಗೆ ಸಹಾಯಕವಾಗಿರುವ ಶಿಶು ಕಲ್ಯಾಣ ಕಾರ್ಯಕ್ರಮಗಳು, ಕ್ರೇಷ್‌ಗಳು, ಮಹಿಳಾ ಕೇಂದ್ರಗಳು ಮುಂತಾದವು, ಸರ್ಕಾರದ ಕಡಿತಗಳಿಗೆ ಮೊಟ್ಟ ಮೊದಲಿಗೆ ಬಲಿಯಾಗಿ ಬಿಡುತ್ತವೆ.

ಬಿ. ಶೈಕ್ಷಣಿಕ ಸೇವೆಗಳಲ್ಲಿನ ಕಡಿತಗಳು, ಮಹಿಳೆ ಯರ ವಯಸ್ಕರ ಶಿಕ್ಷಣ ತರಗತಿಗಳು ಅಥವಾ ಹೆಣ್ಣು ಮಕ್ಕಳ ವಿಸ್ತರಣಾ ಶಾಲೆಗಳ ಮೇಲೆ ನೇರ ಆತುಕೊಳ್ಳುತ್ತವೆ. ಶಾಲೆಗಳು ಮುಚ್ಚಿ ಹೋದಾಗ ಮತ್ತು ಮನೆ-ಶಾಲೆಗಳ ನಡುವೆ ದೂರ ಜಾಸ್ತಿಯಾದಾಗ, ಮನೆ ಕೆಲಸಗಳಲ್ಲಿ ಸಹಾಯ ಮಾಡಬೇಕಾಗಿರುವ ಹೆಣ್ಣು ಮಕ್ಕಳು ಶಿಕ್ಷಣ ಪಡೆಯುವ ಅವಕಾಶಗಳಿಂದ ಸಹಜವಾಗಿಯೇ ವಂಚಿತರಾಗು ತ್ತಾರೆ.

ಸಿ. ಆಹಾರ ಪದಾರ್ಥಗಳ ಮೇಲಿನ ಸಬ್ಸಿಡಿ ಕೂಡ ಮಹಿಳೆಯರ ಮೇಲೆ ಪರಿಣಾಮ ಬೀರು ತ್ತದೆ. ಮಹಿಳೆಯರು ಕಡಿಮೆ ಬೆಲೆಯ ಅಂಗಡಿ ಗಳನ್ನು ಇಲ್ಲ ಮಾರುಕಟ್ಟೆಗಳನ್ನು ಹುಡುಕುತ್ತಾ ಅಲೆಯುತ್ತಾರೆ. ಅಗ್ಗದ ಆಹಾರಗಳನ್ನು ಅಡಿಗೆ ಮಾಡುತ್ತಾ ಆದರಲ್ಲೂ ಕುಟುಂಬದ ಇತರರು ತಿಂದು ಉಳಿದಿದ್ದನ್ನು ಉಣ್ಣುತ್ತಾರೆ.

ನಿರುದ್ಯೋಗ ಸೃಷ್ಟಿ

ಮಹಿಳೆಯರು ಪುರುಷರಿಗಿಂತ ಹೆಚ್ಚು ಸುಲಭವಾಗಿ ನಿರುದ್ಯೋಗಕ್ಕೆ ಸಿಕ್ಕಿ ಹಾಕಿಕೊಳ್ಳುತ್ತಾರೆ. ಏಕೆಂದರೆ :

ಎ. ಮಹಿಳೆಯರು ಹೆಚ್ಚಾಗಿ ಆಹಾರ ಪದಾರ್ಥ ಗಳನ್ನು ಪ್ಯಾಕ್ ಮಾಡುವುದು, ಅಸೆಂಬಲ್ ಮಾಡುವುದು ಮುಂತಾದ ಕಡಿಮೆ ಕುಶಲತೆಯ ಕೆಲಸಗಳಲ್ಲಿ ನಿರತರಾಗಿದ್ದು, ಮೆಶೀನುಗಳು ಈ ಕೆಲಸಗಳನ್ನು ಪಲ್ಲಟಗೊಳಿಸುತ್ತದೆ.

ಬಿ. ಮಹಿಳೆಯರು ಟ್ರೇಡ್ ಯೂನಿಯನ್‌ಗಳಲ್ಲಿ ಸದಸ್ಯರಾಗಿರುವುದು, ಅದರ ಚಟುವಟಿಕೆಗಳಲ್ಲಿ ಭಾಗವಹಿಸುವುದು ಕಡಿಮೆ ಮತ್ತು

ಸಿ. ತಮ್ಮ ಹೆಂಡತಿ, ತಾಯಿ ಮುಂತಾದ ಕೌಟುಂಬಿಕ ಪಾತ್ರಗಳ ನಿರ್ವಹಣೆಗಾಗಿ ಮಹಿಳೆ ಯರು ಅನೇಕ ಸಲ ಅಭದ್ರತೆಯ ತಾತ್ಕಾಲಿಕ ನೌಕರಿಗಳನ್ನು ಸೇರಿಕೊಳ್ಳುತ್ತಾರೆ.

ಉದ್ಯೋಗ ಸಂಬಂಧೀ ಕಾನೂನುಗಳಿಂದಾಗಲೀ ರಕ್ಷಣೆ ಇರುವುದಿಲ್ಲ. ಆರ್ಥಿಕ ಸ್ಥಿತಿಗತಿ ಹದಗೆಡುತ್ತಾ ಹೋದಂತೆ ಹೆಚ್ಚು-ಹೆಚ್ಚು ಮಹಿಳೆಯರು ವೇಶ್ಯಾ ವೃತ್ತಿಗೆ ತಳ್ಳಲ್ಪಡುತ್ತಾರೆ.

ಆರೋಗ್ಯ ಸೇವೆಗಳಲ್ಲಿನ ಕಡಿತಗಳು ಕೂಡ ಮಹಿಳೆಯರ ಮೇಲೆ ತೀವ್ರ ತೆರನಾದ ಪರಿಣಾಮ ಉಂಟು ಮಾಡುತ್ತವೆ. ದೇಶದ ಒಟ್ಟಾರೆ ಉತ್ಪನ್ನ(GNP)ದ ಹೆಚ್ಚು ಹೆಚ್ಚು ಶೇಕಡವಾರು ಭಾಗಗಳು ವಿದೇಶೀ ಸಾಲಗಳ ಮೇಲಿನ ಬಡ್ಡಿಗಾಗಿಯೇ ವ್ಯಯವಾಗಲ್ಪಡುವಾಗ ಈಗಾಗಲೇ ದುಸ್ಥಿತಿಯಲ್ಲಿರುವ ಆರೋಗ್ಯ ಸೇವೆಗಳು ಇನ್ನೂ ಅವನತಿ ಹೊಂದುತ್ತವೆ. ಲ್ಯಾಟಿನ್ ಅಮೇರಿಕಾದಲ್ಲಿ ತಡೆಗಟ್ಟಬಹುದಾದ ರೋಗಗಳಾದ ಅತಿಬೇಧಿ, ಇನ್‌ಫ್ಲೂಯನ್ಸಾಗಳು, 25-44 ವರ್ಷಗಳ ಮಹಿಳೆಯರ ಸಾಲಿನ ಶೇಕಡ 46ರಷ್ಟು ಭಾಗವನ್ನು ಆಕ್ರಮಿಸಿಕೊಳ್ಳುತ್ತವೆ.

ಮಹಿಳೆ ಮತ್ತು ವಾಣಿಜ್ಯ ಬೆಳೆಗಳು

ಸಾಲದ ಹೊರೆಯಲ್ಲಿ ಬಿದ್ದ ದೇಶಗಳು, ತಮ್ಮ ಸಾಲದ ಬಿಕ್ಕಟ್ಟಿನ ಪರಿಹಾರಕ್ಕಾಗಿ ಹೆಚ್ಚೆಚ್ಚು ವಾಣಿಜ್ಯ ಬೆಳೆಗಳನ್ನು ರಫ್ತಿಗಾಗಿ ಬೆಳೆಯುವುದನ್ನು ತೀರ್ಮಾನಿಸಿದಾಗ, ಅದಕ್ಕಾಗಿ ಅವಶ್ಯಕ ಆಹಾರ ಪದಾರ್ಥ ಬೆಳೆಯುವ ಭೂಮಿಗಳು ಆಕ್ರಮಿಸಿಕೊಳ್ಳಲ್ಪಡುತ್ತವೆ. ಇಲ್ಲಿ ಅನೇಕ ಆಫ್ರಿಕನ್ ದೇಶಗಳ ಉದಾಹರಣೆಗಳು ಎಚ್ಚರಿಕೆ ಕೊಡುತ್ತವೆ. ಆಫ್ರಿಕನ್ ಸಮಾಜಗಳಲ್ಲಿ ಶೇಕಡ 90ರಷ್ಟು ಆಹಾರ ಪದಾರ್ಥಗಳನ್ನು ಉತ್ಪಾದಿಸುವ ಮಹಿಳೆಯರು ತಮ್ಮ ಸಾಂಪ್ರದಾಯಕ ಕೃಷಿ ಭೂಮಿಯಿಂದ ಕಗ್ಗಾಡಿನ ಬರಡು ಭೂಮಿಗಳಿಗೆ ತಳ್ಳಲ್ಪಟ್ಟರು; ಕೊರತೆಯಿರುವ ಸಂಪನ್ಮೂಲಗಳು ಮತ್ತು ಹೂಡಿಕೆಗಳು ಕಬ್ಬು, ಟೀ, ಕಾಫಿ, ಕೋಕಾ ಮುಂತಾದ ವಾಣಿಜ್ಯ ಬೆಳೆಗಳೆಡೆಗೆ ಕೇಂದ್ರೀಕರಿಸಲ್ಪಟ್ಟು ಆಹಾರ ಉತ್ಪಾದನೆ ಮೂಲೆಗುಂಪಾಯಿತು. ಮಹಿಳೆಯರನ್ನು ಅವರು ತಮ್ಮ ಸಾಂಪ್ರದಾಯಕ ಆಹಾರ ಬೆಳೆಯುವುದರ ಜತೆಗೆ ದೊಡ್ಡ ದೊಡ್ಡ ಎಸ್ಟೇಟುಗಳಲ್ಲಿ ವಾಣಿಜ್ಯ ಬೆಳೆಗಳಿಗೆ ಪುರುಷರಿಗೆ ಅರ್ಧದಷ್ಟು ಕೂಲಿಗೆ ದುಡಿಯುವಂತೆ ನಿರೀಕ್ಷಿಸಲಾಯಿತು. ವಾಣಿಜ್ಯ ಬೆಳೆಗಳಲ್ಲಿನ ಅಧಿಕ ಉತ್ಪಾದನೆಯು ಆಫ್ರಿಕಾದ ಅರ್ಥ ವ್ಯವಸ್ಥೆಗೆ ಅಲ್ಪಕಾಲಿಕ ಲಾಭಗಳನ್ನು ತಂದುಕೊಟ್ಟಿತು. ಆದರೆ ಆಹಾರ ಉತ್ಪನ್ನಗಳೆಡೆಗಿನ ತೀರಾ ಕಡಿಮೆ ಹೂಡಿಕೆಯಿಂದಾಗಿ ಉಂಟಾದ ಭಯಂಕರ ಬರಗಾಲ ಮತ್ತು ಆಹಾರ ಕೊರತೆಗಳು 1980ರ ದಶಕದಲ್ಲಿ ಈ ದೇಶಗಳನ್ನು ಧ್ವಂಸ ಮಾಡಿದವು.

ನಾವು ಶಕ್ತರಲ್ಲ

"ನಮ್ಮ ಮಕ್ಕಳಿಗಾಗಿ ಮಾಂಸ ಹೊಂದಿಸಲು ನಾವು ಶಕ್ತರಲ್ಲ. ನಮಗೆ ತಿನ್ನಲು ಏನೂ ಇಲ್ಲ. ನಾವು ಬೀದಿಗಳಲ್ಲಿ ಸಾಯುವುದಕ್ಕಿಂತ ಇಲ್ಲಿ ಸಾಯುವುದೇ ಲೇಸು. ಇಲ್ಲಿ ನಾವು ನಮಗಾಗಿ ಬಂದಿಲ್ಲ. ನಾವು ಪ್ರತಿಯೊಬ್ಬರಿಗಾಗಿ, ಹೆಚ್ಚಾಗಿ ನಮ್ಮ ಮಕ್ಕಳಿಗಾಗಿ ಹೋರಾಡುತ್ತಿದ್ದೇವೆ" ಹೀಗೆಂದವರು 1985ರಲ್ಲಿ ಬೊಲಿವಿಯಾದ ರಾಜಧಾನಿ ಲಾಪಾಸ್‌ನಲ್ಲಿ 1985ರಲ್ಲಿನ ಉಪವಾಸ ಸತ್ಯಾಗ್ರಹದ ಮನೆಮಡದಿಯರ ನೂರು ಮಂದಿ ಕಮಿಟಿಯಲ್ಲಿ ಒಬ್ಬರಾದ ಮಸಡೊನಿಯಾ ಕಾನ್‌ಸ್ಯಾನ್‌ಸಾ ಎಂಬ 35 ವರ್ಷದ ಮಹಿಳೆ. ಕಡು ಬಡವರು ಅತ್ಯಾವಶ್ಯಕ ಆಹಾರ ವಸ್ತುಗಳಾದ ಹಾಲು, ಅಕ್ಕಿ, ಸೋಪು, ಸೀಮೆಎಣ್ಣೆ ಮುಂತಾದವನ್ನು ನಿಗದಿತ ಬೆಲೆಯಲ್ಲಿ ಕೊಳ್ಳಲು ಸಾಧ್ಯವಾಗುವಂತಹ 'ಜನಪ್ರಿಯ ಅಂಗಡಿ'ಗಳನ್ನು ತೆರೆಯಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದರು. 5000% ಹಣದುಬ್ಬರದಿಂದ ಆಹಾರ ವಸ್ತುಗಳ ಬೆಲೆ ಕೈಗೆಟುಕದಂತಾಗಿದ್ದವು. ಬೊಲಿವಿಯಾದ ಮಹಿಳೆಯರಿಗೆ ಉಪವಾಸ ಸತ್ಯಾಗ್ರಹವೊಂದೇ ಉಳಿದಿದ್ದ ಮಾರ್ಗ. ಹನ್ನೊಂದು ದಿನಗಳ ನಂತರ ಸರ್ಕಾರ ಆಹಾರ ಬೆಲೆಗಳ ನಿಯಂತ್ರಣ ಮಾಡುವುದಾಗಿ ಆಶ್ವಾಸನೆ ಕೊಟ್ಟಾಗ ಉಪವಾಸ ಸತ್ಯಾಗ್ರಹ ಕೊನೆಗೊಂಡಿತು.

ಮಹಿಳೆಯರು ತಮ್ಮ ಕುಟುಂಬಗಳಲ್ಲಿ, ನೀರು ತರುವುದು, ಉರುವಲು-ಪಶು ಆಹಾರಗಳನ್ನು ಸಂಗ್ರಹಿಸುವುದು, ಅಡಿಗೆ ಮಾಡುವುದು, ಬಟ್ಟೆ ಬಗೆಯುವುದು. ಮಕ್ಕಳನ್ನು ವಯಸ್ಸಾದವರನ್ನು ನೋಡಿಕೊಳ್ಳುವುದು.

ಎರಡು ಪಟ್ಟು ಹೊರೆ

1970ರ ದಶಕದ ಕೊನೆಯಲ್ಲಿ ಮತ್ತು 80ರ ದಶಕದ ಪ್ರಾರಂಭದಲ್ಲಿ ಸರಕಾರವು ರಫ್ತು-ಸಂಬಂಧಿ ಉತ್ಪಾದನೆಯೆಡೆಗೆ ತನ್ನ ಅಭಿವೃದ್ಧಿಯಲ್ಲಿ ಹೆಚ್ಚು ರಫ್ತು ನೀಡಿದಾಗ, ಫಿಲಿಪೈನ್ಸ್ ಅಲ್ಲದೆ ಮಿಂಡನೋವಾದಲ್ಲಿನ ಬುಕೆಡ್‌ನನ್ ಪ್ರಾಂತಗಳು ತಮ್ಮ ಅರ್ಥ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಕಂಡವು. ಹದವಾದ ಹವಾಮಾನ ಮತ್ತು ಫಲವತ್ತಾದ ಭೂಮಿಯನ್ನು ಹೊಂದಿದ್ದ ಪ್ರಾಂತ್ಯವು, ವ್ಯವಸಾಯ-ವ್ಯಾಪಾರೀ ಕಂಪನಿಗಳನ್ನು ವಾಣಿಜ್ಯ ಬೆಳೆಗಳ ಉತ್ಪಾದನೆಗೆ ತನ್ನಡೆಗೆ ಕೂಗಿ ಕರೆಯಿತು.

ವಿದೇಶೀ ಮಾರುಕಟ್ಟೆಯಲ್ಲಿ ಪ್ರಥಮ ಆದ್ಯತೆ ನೀಡಲ್ಪಟ್ಟ ವಾಣಿಜ್ಯ ಬೆಳೆಯೆಂದರೆ ಕಾಫಿ. ಇದಕ್ಕೆ ಅತ್ಯಧಿಕ ವಿದೇಶೀ ವಿನಿಮಯ ಲಭ್ಯವಿದ್ದುದರಿಂದ ಇದನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಬೇಕಾಗಿತ್ತು.

ಅದೇನೇಯಾದರೂ, ರಫ್ತಿಗಾಗಿ ಈ ಬೆಳೆಯನ್ನು ಉತ್ಪಾದಿಸುವಾಗ ಪ್ಲಾಂಟೇಶನ್‌ಗಾಗಿ ವಿಸ್ತಾರವಾದ ಜಾಗದ ಅವಶ್ಯಕತೆ ಇತ್ತು. ಹೀಗಾಗಿ ಸಣ್ಣ, ಸಣ್ಣ ಜಮೀನುಗಳನ್ನು ಒಂದುಗೂಡಿಸಿ ವಿಸ್ತಾರವಾದ ಪ್ಲಾಂಟೇಷನ್ ಮಾಡಲಾಯಿತು. ಹೀಗೆ ಮಾಡುವಾಗ ಸಣ್ಣ ಭೂ ಹಿಡುವಳಿದಾರರು ತಮ್ಮ ಭೂಮಿಗಳಿಂದ ಹೊರದೂಡಲ್ಪಟ್ಟು ತಮ್ಮ ಸಾಂಪ್ರದಾಯಿಕ ಆದಾಯ ಮೂಲದಿಂದ ವಂಚಿತರಾದರು.

ರೈತರು ತಮ್ಮ ಭೂಮಿಗಳಿಂದ ಹೊರದೂಡಲ್ಪಟ್ಟಾಗ ಸಮುದಾಯದಲ್ಲಿನ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳು ತೀವ್ರ ಬದಲಾವಣೆಗಳನ್ನು ಕಂಡವು.

ಜೀವಾಧಾರಿತ ಸ್ವರೂಪೀ ಉತ್ಪಾದನಾ ಕ್ರಮದಿಂದ ಪದಾರ್ಥೀಕರಣ ಸ್ವರೂಪೀ ಉತ್ಪಾದನಾ ಕ್ರಮದೆಡಗಿನ ಸ್ಥಿತ್ಯಂತರವು, ಸಾಮಾಜಿಕ ಮತ್ತು ಲಿಂಗ ಸಂಬಂಧಿಗಳನ್ನು ಬದಲಾಯಿಸಿದವು. ವಿಶೇಷವಾಗಿ ಕೌಟುಂಬಿಕ ವಲಯದಲ್ಲಿ. ಈಗ ಪುರುಷ ಮತ್ತು ಮಹಿಳೆಯರಿಬ್ಬರೂ ತಮ್ಮ ಕುಟುಂಬದ ಉಳಿವಿಗಾಗಿ ಸಂಪಾದಿಸಬೇಕಾದ ಪರಿಸ್ಥಿತಿ ಉಂಟಾಯಿತು.

ಲೇಬರ್ ಕೋರ್ಸ್‌ನಲ್ಲಿ ಸೇರಿಕೊಂಡ ಮಹಿಳೆಯರು ಕೆಲವು ಕೆಲಸಗಳನ್ನು ಮಾಡದೇ ಹೋಗುವುದು ಅನಿವಾರ್ಯವಾಯಿತು. ಅನೇಕ ಕೆಲಸಗಳನ್ನು ಕುಟುಂಬದ ದೊಡ್ಡ ಮಕ್ಕಳು ಮಾಡುವ ರೀತಿಯಲ್ಲಿ ಅವರು ತಮ್ಮ ಮನೆ ಕೆಲಸಗಳನ್ನು ಪುನರ್‌ರೂಪಿಸಬೇಕಾಯಿತು. ಹೀಗಾಗಿ ಅವರು ಮನೆಕೆಲಸಕ್ಕೆ ಕೊಡುವ ಸಮಯದಲ್ಲಿ ಗಮನಾರ್ಹ ಕಡಿತ ಉಂಟಾಯಿತು. ಕೂಲಿಗೆ ಹೋಗದಿರುವ ಹೆಂಗಸರಿಗಿಂತ ಕಡಿಮೆ ಸಮಯವನ್ನು ಕೂಲಿಗೆ ಹೋಗುವ ಹೆಂಗಸರು ತಮ್ಮ ಮನೆ ಕೆಲಸಕ್ಕೆ ಕೊಡುವಂತಾಯಿತು. ಆದರೆ ಇವೆರಡೂ ಸಂದರ್ಭಗಳಲ್ಲೂ ಹೆಂಗಸರು, ತಮ್ಮ ಗಂಡಸರಿಗಿಂತ ಹೆಚ್ಚು ಸಮಯವನ್ನು ಮನೆಕೆಲಸಕ್ಕೆ ವ್ಯಯಿಸುತ್ತಿದ್ದರು.

ಹೊಸ ಬಗೆಯ ಪದಾರ್ಥ ಉತ್ಪಾದನಾ ವ್ಯವಸ್ಥೆಯು ಮಹಿಳೆ ಮತ್ತು ಪುರುಷರ ಸಂಬಂಧದ ಮೇಲೆ ಪರಿಣಾಮವನ್ನೂ ಬೀರಿತು. ಪುರುಷರ ಸ್ವತ್ತೆಂದೇ ಪರಿಗಣಿಸಲಾಗಿದ್ದ ದಿನಗೂಲಿವಲಯವನ್ನು ಈಗ ಮಹಿಳೆಯರು ಪ್ರವೇಶಿಸಿದ್ದರು. ಇದರ ಪರಿಣಾಮ ಅವರ ಕೂಲಿಯ ಮೇಲೆ ಉಂಟಾಯಿತು. ಅವರಿಗೆ ಕಡಿಮೆ ಕೂಲಿಯ, ಕಾಲ-ಕಾಲಕ್ಕೆ ಸಿಗುವ ಕೆಲಸಗಳು ಮಾತ್ರ ದಕ್ಕಕೊಡಿಸಿದವು. ಸಾಮಾನ್ಯ ಕೆಲಸಗಾರರಾದ ಗಂಡಸರಿಗೆ ಲಭ್ಯವಿರುವಂತಹ ಹಿಡುವಳಿ ಭದ್ರತೆಗಳಾಗಲೀ, ಯಾವುದೇ ಅಂಚಿನ ಸೌಲಭ್ಯಗಳಾಗಲೀ ಇವರಿಗೆ ಲಭ್ಯವಿಲ್ಲ.

ಮುಂತಾದ ಕೆಲಸಗಳನ್ನೂ ಸಾಮಾನ್ಯವಾಗಿ ಮಾಡುತ್ತಾರೆ. ಆದರೆ ಈ ಕೆಲಸಗಳು ಹಣವನ್ನು ತರುವುದಿಲ್ಲ. ಮತ್ತು ಅರ್ಥ ವ್ಯವಸ್ಥೆಯಲ್ಲಿ ಇದಕ್ಕೆ ಸ್ಥಾನವಿಲ್ಲ. ಹೀಗಾಗಿ, ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ಇರುವುದು ತುಂಬಾ ಕಮ್ಮಿ ಮತ್ತು ಅರ್ಥವ್ಯವಸ್ಥೆಯಲ್ಲಿ ಬಿಕ್ಕಟ್ಟುಂಟಾದಾಗ ಅವರು ತುಂಬಾ ಬೇಗ ಅದರ ಪರಿಣಾಮಗಳಿಗೆ ಒಳಗಾಗಿ ಬಿಡುತ್ತಾರೆ.

ಮಹಿಳೆ ಮತ್ತು ರಫ್ತು ಉದ್ದೇಶದ ಕೈಗಾರಿಕೀಕರಣ :

ಕೈಗಾರಿಕೆಯಲ್ಲಿ, ಸಾಮಾನ್ಯವಾಗಿ ಮಹಿಳೆಯರ ಕೆಲಸಗಳು ಕಡಿಮೆ ಸಂಬಳದವು ಮತ್ತು ಹೆಚ್ಚು ಶ್ರಮದ್ದವು ಆಗಿರುತ್ತದೆ. ಹೊಸತಾಗಿ ಕೈಗಾರಿಕೀಕರಣಗೊಂಡ ಅರ್ಥವ್ಯವಸ್ಥೆಗಳಾದ ದಕ್ಷಿಣ ಕೊರಿಯಾ. ಥೈವಾನ್, ಹಾಂಗ್‌ಕಾಂಗ್ ಮತ್ತು ಸಿಂಗಪೂರಗಳು ಮತ್ತು ಇನ್ನಿತರ ದೇಶಗಳಾದ ಫಿಲಿಪೈನ್ಸ್, ಮೆಕ್ಸಿಕೊ ಮತ್ತು ಕೆಲವು

ಲಿಂಗ ಬಡತನ ಮತ್ತು ಮಾರುಕಟ್ಟೆ

"ಮಾರುಕಟ್ಟೆ ಶಕ್ತಿಗಳು ಲಿಂಗ ಸಿದ್ಧಾಂತವನ್ನು ಪ್ರಭಾವಿಸುವ ಮತ್ತು ಸ್ತ್ರೀ ಮೌಲ್ಯಗಳನ್ನು ಭದ್ರಪಡಿಸುವ ಆಕಾರ ಸಾಮರ್ಥ್ಯವನ್ನು ಹೊಂದಿವೆ." ಎಂದು "ಲಿಂಗ ಮತ್ತು ಭಾರತದಲ್ಲಿನ ಬಡತನ" ಎನ್ನುವ ವಿಶ್ವ ಬ್ಯಾಂಕಿನ ವರದಿ ಹೇಳುತ್ತದೆ. Market friendly ಮತ್ತು Globalisation ಸಿದ್ಧಾಂತಗಳನ್ನಾಧರಿಸಿದ ಪಶ್ಚಿಮದ ಮಾದರಿಯ ಅಭಿವೃದ್ಧಿಯನ್ನು ಹೇರುವುದು ಈ ಅಧ್ಯಯನದ ಉದ್ದೇಶವಾಗಿತ್ತು. ಭಾರತೀಯ ಮಹಿಳೆಯರ ಸಮಸ್ಯೆಗಳಿಗೆ ಒಂದು 'ಮಾರ್ಕೆಟ್ ಫ್ರೆಂಡ್ಲಿ' ಪರಿಹಾರವನ್ನು ಸೂಚಿಸುವ ಮೊದಲು, 'ಮಾರ್ಕೆಟ್ ಫ್ರೆಂಡ್ಲಿ' ದೇಶಗಳಲ್ಲಿನ ಮಹಿಳೆಯರ ಅನುಭವಗಳನ್ನು ಸಂಪೂರ್ಣ ಕಡೆಗಣಿಸಿದೆ. ಈ ಅಧ್ಯಯನವು ವಿಶ್ವಬ್ಯಾಂಕ್ ಮತ್ತು IMF ಗಳಿಂದ ಬೆಂಬಲ ಪಡೆದ ಪಾಶ್ಚಾತ್ಯ ದೇಶಿಯ ಬಂಡವಾಳಶಾಹೀ ಮಾದರೀ ಬೆಳವಣಿಗೆಯಿಂದ ಉಂಟಾಗುವ ಸಾಮಾಜಿಕ ಮತ್ತು ಆರ್ಥಿಕ ಅಸಂಗತತೆಗಳ ವಿಚಾರದಲ್ಲಿ ಮೌನದಿಂದಿದೆ. ಈ ಬಗೆಯ ಅಸಂಗತತೆಗಳಿಂದ ತುಂಬಾ ಬಳಲುವವರೆಂದರೆ ಮಹಿಳೆಯರು. 'ಮಾರ್ಕೆಟ್ ಫ್ರೆಂಡ್ಲಿ' ಧೋರಣೆಗಳು ಅಭಿವೃದ್ಧಿಯ ಹೊಸ ಪೋಷಕರನ್ನಾಗಿರಿಸಬಯಸುವ ಟ್ರಾನ್ಸ್ ನ್ಯಾಷನಲ್ ಕಾರ್ಪೊರೇಷನ್‌ಗಳು ಕೂಡ ಲಿಂಗದ ವಿಚಾರದಲ್ಲಿ ಸೂಕ್ಷ್ಮರಾಗಿಲ್ಲ. ವಾಸ್ತವದಲ್ಲಿ ಮಹಿಳೆಯರು ಕೇವಲ ಆರ್ಥಿಕವಾಗಿ ಮಾತ್ರವಲ್ಲ, ಲೈಂಗಿಕವಾಗಿ ಕೂಡ ಶೋಷಣೆಗೆ ಒಳಪಡುವ ಉದಾಹರಣೆಗಳು ನಮ್ಮ ದೇಶದಲ್ಲಿ ಸಾಕಷ್ಟಿವೆ. ವಿಶೇಷವಾಗಿ ರಫ್ತು ಸಂಸ್ಕರಣಾ ವಲಯಗಳಲ್ಲಿ ಕೆಲಸಕ್ಕೆ ನೇಮಕಗೊಂಡವರಲ್ಲಿ 70 ರಿಂದ 80% ಮಹಿಳೆಯರು ಯುವತಿಯರೇ. ಈ ವಲಯಗಳು INC ಗಳು ಮತ್ತು ಅವುಗಳ ಸಹವರ್ತಿಗಳ ಪ್ರಾಬಲ್ಯವನ್ನು ಹೊಂದಿವೆ. ILO ಅಂದಾಜಿನ ಪ್ರಕಾರ 'ಮಾರ್ಕೆಟ್ ಫ್ರೆಂಡ್ಲಿ' ಧೋರಣೆಯು ಮುಂಬರುವ ವರ್ಷಗಳಲ್ಲಿ ದೇಶದಲ್ಲಿ 80 ಮಿಲಿಯ ನಿರುದ್ಯೋಗಿಗಳನ್ನು ಸೃಷ್ಟಿಸುತ್ತದೆ. ಶೇಕಡ 90ರಷ್ಟು ಮಹಿಳೆಯರು ನೇಮಕಗೊಂಡಿರುವ ಅಸಂಘಟಿತ ಕ್ಷೇತ್ರವು ಇದರ ಅತಿ ಕೆಟ್ಟ ಪರಿಣಾಮವನ್ನು ಅನುಭವಿಸುತ್ತದೆ. ಇಷ್ಟಲ್ಲದೆ ಆರೋಗ್ಯ, ಶಿಕ್ಷಣ, ಶಿಶುಕಲ್ಯಾಣ ಮತ್ತು ಪೌಷ್ಟಿಕಾಹಾರಗಳ ಮೇಲಿನ ಸಬ್ಸಿಡಿಯಲ್ಲಿನ ಕಡಿತ ಸಮಾಜದ ಬೇರೆ ಯಾವುದೇ ವರ್ಗಗಳಿಗಿಂತ ಹೆಚ್ಚಾಗಿ ಮಹಿಳೆಯರ ಮೇಲೆ ಪ್ರಭಾವ ಬೀರುತ್ತವೆ. ವಿಶ್ವಬ್ಯಾಂಕ್ ಮತ್ತು IMF ಗಳ ಮಂತ್ರವಾದ 'ಮಾರ್ಕೆಟ್ ಫ್ರೆಂಡ್ಲಿ' ಧೋರಣೆ ಮತ್ತು ಅಭಿವೃದ್ಧಿಯಲ್ಲಿ ಸರ್ಕಾರದ ಕನಿಷ್ಟ ಮಧ್ಯ ಪ್ರವೇಶಿಕೆ" ಇವುಗಳನ್ನು ಪರಿಶೀಲಿಸಿದಾಗ ದೇಶದಲ್ಲಿ ಬರೀ ಬಡತನ ಮಾತ್ರವಲ್ಲ ಲಿಂಗ ಭೇದವೂ ಮುಂದುವರೆಯುತ್ತಲೇ ಹೋಗುತ್ತದೆ. ಎಂಬುದು ಸ್ಪಷ್ಟವಾಗುತ್ತದೆ.

ಕೆರೆಬಿಯನ್ ದೇಶಗಳಲ್ಲಿ, ರಫ್ತು ಸಂಸ್ಕರಣಾ ವಲಯುಗಳಲ್ಲಿ ಬಹುರಾಷ್ಟ್ರೀಯ ಕಾರ್ಪೋರೇಷನ್‌ನ ಭಾಗವಹಿಕೆಯಿಂದಾಗಿ ಮಹಿಳೆಯನ್ನು ಹೆಚ್ಚೆಚ್ಚು ಸಂಘಟಿತ ಲೇಬರ್ ಮಾರ್ಕೆಟ್ಟಿನೊಳಗಡೆಗೆ ಒಳಗೊಳ್ಳಿಸಿಕೊಳ್ಳಲಾಗುತ್ತಿದೆ. ಫಿಲಿಫೈನ್ಸ್‌ನಲ್ಲಿ ಸರಕಾರವು ರಫ್ತು ಒತ್ತಾಸೆಯನ್ನಾಧರಿಸಿದ ಕೈಕಾರಿಕೀಕರಣ ತಂತ್ರವನ್ನು ಕೈಗೆತ್ತಿಕೊಂಡಿತು. ವಿದೇಶೀ ಹೂಡಿಕೆದಾರರನ್ನೂ ಆಕರ್ಶಿಸಲೋಸುಗ ರಫ್ತು ಸಂಸ್ಕರಣಾ ವಲಯುಗಳಲ್ಲಿ ಮಜೂರಿಯನ್ನು ತುಂಬಾ ಕಮ್ಮಿ ಇಡಲಾಯಿತು ಮತ್ತು ಮಹಿಳಾ ಕೆಲಸಗಾರರ ಹೋರಾಟವನ್ನು ಅಡಗಿಸಲು ಹೊಸ ಕಾನೂನುಗಳನ್ನು ತರಲಾಯಿತು. ಆದರೆ, ಸ್ಥಳೀಯ ಕೈಗಾರಿಕೆಗಳಿಗಿಂತ ಅವರ ಕೂಲಿ ಜಾಸ್ತಿಯಿರುವ ಸ್ಥಳಗಳಲ್ಲೂ ಕೂಡ ಅವರ ಕೆಲಸದ ಸ್ಥಿತಿ, ಕೆಲಸ ಮತ್ತು ಬದುಕಿನ ಸ್ಥಿತಿಯೇನೂ ಉತ್ತಮಗೊಂಡಿಲ್ಲ. ಬಹುತೇಕರು ಸಣ್ಣ ವಯಸ್ಸಿನವರೂ, ಒಬ್ಬಂಟಿಗರೂ ಆಗಿದ್ದು ಅರೆಕುಶಲ ಇಲ್ಲವೇ ಕುಶಲವಲ್ಲದ ಕೆಲಸಗಳಲ್ಲಿ ತೊಡಗಿದ್ದು, ಲೇಬರ್ ಲೆಜಿಸ್ಲೇಷನ್‌ನಿಂದಾಗಲೀ ಟ್ರೇಡ್ ಯೂನಿಯನ್‌ಗಳಿಂದಾಗಲೀ ರಕ್ಷಣೆ ಹೊಂದಿರುವುದಿಲ್ಲ.

ಅನೇಕ ಮೂರನೇ ವಿಶ್ವರಾಷ್ಟ್ರಗಳು ರಫ್ತು ಸಂಸ್ಕರಣಾ ವಲಯುಗಳನ್ನು (EPZS) ಪ್ರಾರಂಭಿಸಿದ್ದು, ಇವು ಟ್ರಾನ್ಸ್ ನ್ಯಾಷನಲ್ ಕಾರ್ಪೋರೇಷನ್ (TNCS)ಗಳಿಗೆ ಉತ್ಪಾದನಾ ತಾಣಗಳಾಗಿವೆ. ಆಕರ್ಷಕ ತೆರಿಗೆ ಪ್ಯಾಕೇಜ್‌ಗಳು ಮತ್ತು ಅಗ್ಗದ ಒಳ್ಳೇ ಶಿಸ್ತಿನ ಶ್ರಮಶಕ್ತಿಯು ಇಲ್ಲಿನ ಪ್ರಮುಖ ಪ್ರಚೋದನೆಗಳಾಗಿವೆ. ಇಲ್ಲಿ ಯುವತಿಯರು ಎಲೆಕ್ಟ್ರಾನಿಕ್ಸ್, ಬಟ್ಟೆಗಳು, ಚಪ್ಪಲಿಗಳ ಶ್ರಮ-ತೀವ್ರತೆಯ ತಯಾರಿಕೆಯಲ್ಲಿ ಒಳಗೊಂಡಿದ್ದಾರೆ. ಬಹುತೇಕ ಸಮಯುಗಳಲ್ಲಿ ಕೆಲಸವು ಅವರ ಆರೋಗ್ಯದ ಮೇಲೆ ಕೆಟ್ಟ ರೀತಿಯಲ್ಲಿ ಪರಿಣಮಿಸುತ್ತಿದ್ದು ವೃತ್ತಿ ಭದ್ರತಾ ಸೌಲಭ್ಯಗಳಿರುವುದು ತುಂಬಾ ಕಮ್ಮಿ. ಮೆಕ್ಸಿಕೊ ಬಹುಪಾಲು ಮಹಿಳೆಯರೇ ಆಗಿರುವ ಯು. ಎಸ್. ಗಡಿ ಪ್ರದೇಶದಲ್ಲಿರುವ ಮಾಕ್ವಿಲಡೋರಾ ಸ್ಥಾವರಗಳು ಬಹುಪಾಲು ಮಹಿಳೆಯರೇ ಆಗಿರುವ ಕಾಲುಮಿಲಿಯ ಕೆಲಸಗಾರರನ್ನು ಹೊಂದಿದ್ದು, ಅವರು ತೀರಾ ಅನಾರೋಗ್ಯಕರ ಸನ್ನಿವೇಶದಲ್ಲಿ ತುಂಬಾ ಕಮ್ಮಿ ಸೌಲಭ್ಯಗಳೊಂದಿಗೆ ದಿನಕ್ಕೆ 18 ಗಂಟೆಗಳ ಕಾಲ ದುಡಿಯುತ್ತಾರೆ.

ರಫ್ತು ಸಂಸ್ಕರಣಾ ವಲಯುಗಳು (EPZS) ಮತ್ತು ಶೇಕಡ 100ರಷ್ಟು ರಫ್ತು ಉದ್ದೇಶದ ಘಟಕಗಳು ಬಹಳ ಕಾಲದಿಂದ ದೇಶದ ಕಳಕಳಿಯಾಗಿತ್ತು. ಹೊಸ ಆರ್ಥಿಕ ಔದಾರ್ಯ ನೀತಿಗಳು, ರಫ್ತು ಸಂಸ್ಕರಣಾ ವಲಯುಗಳು ಮತ್ತು ರಫ್ತು ಉದ್ದೇಶದ ಘಟಕಗಳಲ್ಲಿನ ದೊಡ್ಡ ಮಟ್ಟದ ವಿಸ್ತರಣೆಯತ್ತ ಗಮನವಿಡುತ್ತದೆ. ಈ ಸದ್ಯದಲ್ಲಿ ನಮ್ಮ ದೇಶದಲ್ಲಿ, ಗುಜರಾತಿನ ಕಾಂಡ್ಲಾ, ಮಹಾರಾಷ್ಟ್ರದ ಸಾಂತಕ್ರೋಸ್, ಪಶ್ಚಿಮ ಬಂಗಾಳದ ಫಾಲ್ಟಾ, ಉತ್ತರ ಪ್ರದೇಶದ ನಾಯಡಾ, ಕೇರಳದ ಕೊಚಿನ್, ತಮಿಳುನಾಡಿನ ಮದ್ರಾಸು, ಆಂಧ್ರದ ವಿಶಾಖಪಟ್ಟಣ ಇವು ಏಳು ರಫ್ತು ಸಂಸ್ಕರಣ ವಲಯಗಳಾಗಿವೆ.

ಈ ವಲಯುಗಳಲ್ಲಿ ಕೆಲಸಕ್ಕೆ ನೇಮಕಗೊಂಡಿರುವವರೆಲ್ಲಾ ಸಾಮಾನ್ಯವಾಗಿ 17–23 ವರ್ಷದ ಅಂತರದಲ್ಲಿರುವ ಅವಿವಾಹಿತ ತರುಣಿಯರೇ, ಉದಾಹರಣೆಗೆ, ಎಲೆಕ್ಟ್ರಾನಿಕ್ಸ್ ಕೈಗಾರಿಕೆಯಲ್ಲಿ, ಮಹಿಳೆಯರನ್ನೇ ಕೆಲಸಕ್ಕೆ ನೇಮಿಸಿಕೊಳ್ಳಲಾಗುತ್ತದೆ, ಏಕೆಂದರೆ, ಎಲೆಕ್ಟ್ರಾನಿಕ್ಸ್ ಉತ್ಪಾದನೆಯ ಕೆಲಸ ಒಳಗೊಳ್ಳುವ ಏಕತಾನತೆ, ಕಣ್ಣಿಗೆ ಶ್ರಮ ಉಂಟಾಗುವಿಕೆ, ಕೈಕೆಲಸದ ಸೂಕ್ಷ್ಮತೆ ಇತ್ಯಾದಿಗಳಿಗೆ ಮಹಿಳೆಯರೇ ತಕ್ಕವರು ಎಂಬ ಭಾವನೆ ಅವರಲ್ಲಿದೆ. ಬಹುತೇಕ ಸರ್ಕಾರಗಳು ಹೀಗೆಯೇ ನಂಬಿದ್ದು ವಿದೇಶೀ ಹೂಡಿಕೆದಾರರನ್ನು ಈ 'ಮಿಥ್'ನಿಂದಲೇ ಆಕರ್ಷಿಸುತ್ತವೆ ಕೂಡ.

ಟ್ರಾನ್ಸ್ ನ್ಯಾಷನಲ್ ಕಾರ್ಪೋರೇಷನ್‌ಗಳು, ಕಡಿಮೆ ಮಜೂರಿ ಕೊಡುವುದು ಮಾತ್ರವಲ್ಲದೆ ಇನ್ನೂ ಅನೇಕ ರೀತಿಯಲ್ಲಿ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುತ್ತವೆ. ವಿದೇಶಕ್ಕೆ ತಮ್ಮ ಸ್ಥಾವರವನ್ನೂ ಕೊಂಡೊಯ್ದಾಗ ಯು.ಎಸ್. ಸ್ಟ್ಯಾಂಡರ್ಡಿಗನುಗುಣವಾಗಿ ಉತ್ಪಾದನೆಯನ್ನೂ ಶೇ. 25ರಷ್ಟು ತ್ವರಿತಗೊಳಿಸಲಾಗುತ್ತದೆ. ಮತ್ತು ಕೆಲಸದ ಗಂಟೆಗಳು ಸರಾಸರಿ ಶೇ. 50ರಷ್ಟು ಅಧಿಕಗೊಳ್ಳುತ್ತವೆ. ರಫ್ತು ಸಂಸ್ಕರಣಾ ವಲಯುಗಳಲ್ಲಿ ಕೆಲಸ ಮಾಡುವವರು ಶೇಕಡ 85ರಷ್ಟು ತರುಣಿಯರೇ ಆಗಿದ್ದು ಅವರೆಲ್ಲಾ ತಮ್ಮ ಹದಿನಾರನೇ ವಯಸ್ಸಿನಲ್ಲೇ ಕೆಲಸ ಪ್ರಾರಂಭಿಸಿದವರಾಗಿರುತ್ತಾರೆ. ಅವರು ತಮ್ಮ

25ನೇ ವಯಸ್ಸಿನ ವೇಳೆಗೆ ಅದೇ ಗತಿಯಲ್ಲಿ ಕೆಲಸ ಮಾಡಲು ಸಾಧ್ಯವಾಗದೇ ಹೋಗಿ ಬೇರೆ ಕಡೆ ಕೆಲಸಕ್ಕೆ ಪ್ರಯತ್ನಿಸ ಬೇಕಾಗುತ್ತದೆ.

ರಫ್ತು ಸಂಸ್ಕರಣಾ ವಲಯಗಳ ಕೆಲಸಗಾರರಿಗೆ ಇನ್ನೊಂದು ಮುಖ್ಯ ಸಮಸ್ಯೆಯೆಂದರೆ ಆರೋಗ್ಯ. ಅನೇಕ ದೇಶಗಳಲ್ಲಿ ಮಹಿಳೆಯರು, ಯಾವುದೇ ರಕ್ಷಣಾ ಸಾಧನಗಳಿಲ್ಲದೆ ವಿಷಪೂರಿತ ರಾಸಾಯನಿಕಗಳೊಟ್ಟಿಗೆ ಕೆಲಸ ಮಾಡುತ್ತಾರೆ. ಎಲೆಕ್ಟ್ರಾನಿಕ್ಸ್ ಕೆಲಸಗಾರರು ಸಿಲಿಕಾನ್ ತುಂಡುಗಳನ್ನು ದಿನಯಿಡೀ ಮೈಕ್ರೊಸ್ಕೋಪಿನಲ್ಲಿ ಪರೀಕ್ಷಿಸುತ್ತಲೇ ಇರುತ್ತಾರೆ. ಕೆಲ ವರ್ಷಗಳ ನಂತರ ಅವರ ದೃಷ್ಟಿ ಸಂಪೂರ್ಣ ಮಂದವಾಗಿ ಹೋಗಿಬಿಟ್ಟು, ಅವರೂ ಬೇರೆ ಕೆಲಸ ಹುಡುಕಿಕೊಳ್ಳಬೇಕಾಗುತ್ತದೆ.

ಟ್ರಾನ್ಸ್ ನ್ಯಾಷನಲ್ ಕಾರ್ಪೊರೇಷನ್‌ಗಳ ವಿಷಯದಲ್ಲಿ, ಕೆಲಸದ ಸ್ಥಳಗಳಿಗೆ ಸಂಬಂಧಪಟ್ಟಂತೆ ಯಾವುದೇ ನಿಯಂತ್ರಣಗಳಿರದೇ ಹೋಗಿರುವುದು ಅವುಗಳ ಲಾಭಕ್ಕೆ ಏಣಿ ಹಾಕಿಕೊಟ್ಟಿದೆ. ಇದನ್ನೂ ಅನೇಕ ಮೂರನೇ ರಾಷ್ಟ್ರಗಳಲ್ಲಿ ಪರಿಸರಕ್ಕೆ ಸಂಬಂಧಿಸಿಯೂ ಹೇಳಬಹುದು. ಇಡೀ ಸಮುದಾಯಗಳು ವಿಷಪೂರಿತ ವಾತಾವರಣಕ್ಕೆ ತಳ್ಳಲ್ಪಟ್ಟು ಸದಾ ಅಪಾಯದ ನೆರಳಿನಲ್ಲಿರುತ್ತವೆ.

ವಿಶ್ವಕಾರ್ಖಾನೆಯ ಅತಿಮುಖ್ಯ ಲಕ್ಷಣವೆಂದರೆ ಟ್ರಾನ್ಸ್ ನ್ಯಾಷನಲ್ ಸ್ಥಾವರಗಳು ತುಂಬಾ ಚಲನಶೀಲವಾಗಿದ್ದು ಮೂರನೇ ವಿಶ್ವಗಳಲ್ಲಿ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಚಲಿಸುತ್ತಲೇ ಇರುತ್ತವೆ. ಹೀಗಾಗಿ ಅವು ಸರಕಾರಗಳ ಮೇಲೆ ಮತ್ತು ಕೆಲಸಗಾರರ ಮೇಲೆ ದೊಡ್ಡ ರಿಯಾಯತಿಯ ಒತ್ತಡವನ್ನೂ ತರುತ್ತಿರುತ್ತವೆ. ಅವುಗಳ ಒತ್ತಡಗಳನ್ನು ಭರಿಸಲು ಸಾಧ್ಯವಾಗದಿದ್ದಾಗ ಅವು ತಮ್ಮ ಸ್ಥಾವರಗಳನ್ನು ಬೇರೆ ದೇಶಗಳಿಗೆ ಕೊಂಡೊಯ್ಯುತ್ತವೆ.

ಮನೆಯಿಂದ ಹೊರಗಡೆ ದುಡಿಯುವ ಹೆಂಗಸು ತನ್ನ ಸೂಪರ್‌ವೈಸರ್‌ನ ಲೈಂಗಿಕ ಚೇಷ್ಟೆಗಳಿಗೆ ಅಗ್ಗದ ವಸ್ತುವಾಗಿ ಕಂಡು ಬರುತ್ತಾಳೆ. ವಾಸ್ತವದಲ್ಲಿ, ಇವರು ನಿರ್ದಿಷ್ಟ ರೀತಿಯ ಶೋಷಣೆ ಮತ್ತು ದೌರ್ಜನ್ಯಗಳಿಗೆ ಒಳಗಾಗುತ್ತಾರೆ. ಇವುಗಳೆಂದರೆ: ಗರ್ಭಪರೀಕ್ಷೆ (ಅವರು ಗರ್ಭಿಣಿಯರಾಗಿದ್ದಾರೆಂದು ತಿಳಿದ ತಕ್ಷಣ ಕೆಲಸದಿಂದ ತೆಗೆದುಹಾಕಲಾಗುತ್ತದೆ), 25 ವರ್ಷಗಳ ನಂತರ ಕೆಲಸದಿಂದ ತೆಗೆದುಹಾಕುವುದು (ಅವರ "ಅತಿ ಉತ್ಪಾದನಾ" ವರ್ಷಗಳು ಕೊನೆಗೊಳ್ಳುವುದರಿಂದ) ಮತ್ತು ವಿದೇಶೀ ಹೂಡಿಕೆದಾರರನ್ನೂ ಆಕರ್ಷಿಸಲು ಲೈಂಗಿಕ ಪ್ರಚೋದನಾಕಾರೀ ಜಾಹೀರಾತಿಗೆ ಬಳಸಿಕೊಳ್ಳುವುದು.

ವಿಶೇಷ ರಫ್ತು ಸಂಸ್ಕರಣಾ ವಲಯಗಳಲ್ಲಿ, ಮಹಿಳಾ ಕೆಲಸಗಾರರು ತಲೆ ಬೇನೆ, ಬೆನ್ನು ನೋವು, ದೃಷ್ಟಿ ಮಾಂದ್ಯ, ಕಿವುಡು ಮತ್ತು ನಿಶ್ಶಕ್ತಿಗಳಿಂದ ಬಳಲುತ್ತಾರೆ. ಇಂತಹ ವಲಯಗಳಲ್ಲಿ ಕೆಲಸ ಮಾಡುವ ಎಲ್ಲಾ ಮಹಿಳೆಯರ ಮಜೂರಿಯು ತುಂಬಾ ಕಮ್ಮಿಯಿದ್ದು, ಅದು ಒಬ್ಬರ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಿಲ್ಲದೇ ಹೋಗುವಾಗ ತಮ್ಮ ಮಕ್ಕಳನ್ನೂ ನೋಡಿಕೊಳ್ಳಬೇಕಾಗಿರುವ ಮಹಿಳೆಯರ ಪರಿಸ್ಥಿತಿ ಊಹಿಸಲಸಾಧ್ಯ. ವಿಶೇಷ ರಫ್ತು ಸಂಸ್ಕರಣಾ ವಲಯಗಳಲ್ಲಿ ಕಮಿಷನರ್ ಆಫ್ ಲೇಬರ್ (ಬಾಂಬೆ) ಶಿಫಾರಸ್ಸು ಮಾಡಿದ ಕನಿಷ್ಟ ಮಜೂರಿ ಕುಶಲ, ಅರೆಕುಶಲ ಮತ್ತು ಕುಶಲವಲ್ಲದ ಕೆಲಸಗಳಿಗೆ ಕ್ರಮವಾಗಿ ತಿಂಗಳಿಗೆ ರೂ. 420/-ರೂ. 340/- ಮತ್ತು ರೂ. 280/– ಆಗಿದೆ.

ಸ್ವಾಯತ್ತ ಮಹಿಳಾ ಸಂಸ್ಥೆಗಳ ರಾಷ್ಟ್ರೀಯ ಸಮ್ಮೇಳನ

ಕಳೆದ ಸಂಚಿಕೆಯಲ್ಲಿ ಕರ್ನಾಟಕದಲ್ಲಿ ಮಹಿಳಾ ಸಂಘಟನೆಗಳ ಸೋಲಿನ ಬಗ್ಗೆ ಬರೆಯಲಾಗಿತ್ತು. ಈ ಸಂಚಿಕೆಯಲ್ಲಿ ಸ್ವಾಯತ್ತ ಮಹಿಳಾ ಸಂಸ್ಥೆಗಳ ಉಗಮ ಹಾಗೂ ಈವರೆಗೆ ಭಾರತದಲ್ಲಿ ನಡೆದಿರುವ ರಾಷ್ಟ್ರೀಯ ಮಹಿಳಾ ಅಧಿವೇಶನಗಳ ಒಂದು ಸಂಕ್ಷಿಪ್ತ ವರದಿ ನೀಡಲು ಇಲ್ಲಿ ಪ್ರಯತ್ನಿಸಲಾಗಿದೆ. ನೀವು ಎಂತಹದೇ ಮಹಿಳಾ ಸಂಘಟನೆಯಲ್ಲಿ ಕೆಲಸ ಮಾಡುತ್ತಿರಿ, ನೀವು ತೊಡಗಿಸಿಕೊಂಡ ಸಂಘಟನೆ ಎಷ್ಟೇ ಚಿಕ್ಕದಾಗಿರಲಿ, ನಿಮ್ಮ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಿ. ಬರುವ ಡಿಸೆಂಬರ್ 6, ಭಾನುವಾರದಂದು ರಾಜ್ಯ ಮಟ್ಟದ ಮಹಿಳಾ ಸಭೆಯೊಂದನ್ನು ಬೆಂಗಳೂರಿನಲ್ಲಿ ಕರೆಯಲಾಗಿದೆ. ರಾಷ್ಟ್ರೀಯ ಮಟ್ಟದ ಐದನೆಯ ಮಹಿಳಾ ಅಧಿವೇಶನದ ಮುನ್ನ ಎಲ್ಲಾ ರಾಜ್ಯಗಳಲ್ಲೂ ರಾಜ್ಯ ಮಟ್ಟದ ಮಹಿಳಾ ಸಭೆಗಳು ನಡೆಯುತ್ತಿವೆ. ನಿಮಗೆ ಆಸಕ್ತಿ ಇದ್ದಲ್ಲಿ ದಯವಿಟ್ಟು ಭಾಗವಹಿಸಿ. ನಿಮ್ಮ ಅನುಭವ ಎಷ್ಟೇ ಚಿಕ್ಕ ಮಟ್ಟದ್ದಾಗಿರಲಿ, ನಮ್ಮೊಂದಿಗೆ ಹಂಚಿಕೊಳ್ಳಿ.

ರಾಷ್ಟ್ರೀಯ ಹಂತದಲ್ಲಿ ಅನೇಕ ಮಹಿಳಾ ಅಧಿವೇಶನಗಳು ನಡೆಯುತ್ತವೆ. ನಾನು ಇಲ್ಲಿ ಬರೆಯುತ್ತಿರುವುದು ಸ್ವಾಯತ್ತತೆ ಹೊಂದಿದ ಮಹಿಳಾ ಸಂಸ್ಥೆಗಳ ರಾಷ್ಟ್ರೀಯ ಅಧಿವೇಶನ ಕುರಿತಾಗಿ. ಈ ಸ್ವಾಯತ್ತತೆ ಹೊಂದಿದ ಮಹಿಳಾ ಸಂಘಟನೆಗಳ ಕಲ್ಪನೆಯನ್ನು ವಿವರಿಸುವುದು ಅಗತ್ಯವಿರುವುದರಿಂದ ಮೊದಲು ಈ ಕಲ್ಪನೆಯನ್ನು ವಿವರಿಸುತ್ತೇನೆ.

ಸ್ವಾಯತ್ತ ಮಹಿಳಾ ಸಂಘಟನೆಗಳ ಉಗಮ

ಸ್ವಾತಂತ್ರ್ಯ ಪೂರ್ವದಲ್ಲಿ :

19ನೆಯ ಶತಮಾನದಲ್ಲಿ ರಾಷ್ಟ್ರೀಯ ಆಂದೋಲನದ ಸಂದರ್ಭದಲ್ಲಿ ಮಹಿಳಾ ಪ್ರಶ್ನೆಗಳನ್ನು, ಸಮಸ್ಯೆಗಳನ್ನು ಕೈಗೆತ್ತಿಕೊಂಡವರು ಉದಾರವಾದೀ ಪುರುಷರು. ಇವರು ಮಹಿಳಾ ಸುಧಾರಣೆಗೆ ಸಂಬಂಧಪಟ್ಟಂತೆ ಅನೇಕ ಪ್ರಯತ್ನಗಳನ್ನು ಹಾಕಿದರು. ಬ್ರಿಟಿಷರು ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಬದುಕಿನಲ್ಲಿ ತಮ್ಮ ಹಸ್ತ ಚಾಚುತ್ತ ಹೋದ ಹಾಗೆ ಮಹಿಳೆಯರನ್ನು ಕಾಪಾಡಬೇಕೆಂಬ ರಕ್ಷಣಾ ಮನೋಭಾವ ಉದಾರವಾದೀ ಪುರುಷರಲ್ಲಿ ಮನೆ ಮಾಡಿದವು. ಸಂಪ್ರದಾಯವು ಹೆಂಗಸರ ದಬ್ಬಾಳಿಕೆಗೆ ಮುಖ್ಯ ಕಾರಣವಾಗಿ ಕಂಡಿತ್ತು ಇವರಿಗೆ. 1929ರ ಸುಮಾರು ಮೂರು ಮಹಿಳಾ ಸಂಘಗಳು ಅಸ್ತಿತ್ವಕ್ಕೆ ಬಂದವು. 1917ರಲ್ಲಿ ಅಖಿಲ ಭಾರತೀಯ ಮಹಿಳಾ ಸಂಘ, 1925ರಲ್ಲಿ ರಾಷ್ಟ್ರೀಯ ಮಹಿಳಾ ಕೌನ್ಸಿಲ್ ಹಾಗೂ 1929ರಲ್ಲಿ ಅಖಿಲ ಭಾರತೀಯ ಮಹಿಳಾ ಅಧಿವೇಶನ ಸಂಸ್ಥೆಗಳ ಉಗಮವಾಯಿತು. ರಾಷ್ಟ್ರೀಯ ಸ್ವಾತಂತ್ರ್ಯದ ಜೊತೆಗೆ ಈ ಸಂಘಟನೆಗಳು ಸಹ-ವಿದ್ಯಾಭ್ಯಾಸ, ವಿದ್ಯಾಭ್ಯಾಸದ ಸವಲತ್ತುಗಳು, ಬಾಲ್ಯ ವಿವಾಹ ರದ್ದತಿ, ವಿಧವಾ ವಿವಾಹ, ವರದಕ್ಷಿಣೆ, ಘರಾದಾ ನಿಷೇಧ, ವೈಯಕ್ತಿಕ ಕಾನೂನುಗಳಾದ ಮದುವೆ ವಿಚ್ಛೇದ, ಆಸ್ತಿ ಹಕ್ಕಿನ ಕಾನೂನುಗಳಲ್ಲಿ ಬದಲಾವಣೆ ಬಯಸಿ ತಮ್ಮ ಬೇಡಿಕೆಗಳೊಂದಿಗೆ ಹೋರಾಡಿದವು. ಈ ಸಂಘಟನೆಗಳು ಉದಾರವಾದೀ ಮಹಿಳಾ ಸಂಸ್ಥೆಗಳಾಗಿದ್ದವು.

ಸಾಂಪ್ರದಾಯಿಕ ಎಡ ಪಕ್ಷಕ್ಕೆ ಸೇರಿದ ಮಹಿಳಾ ಆತ್ಮ ರಕ್ಷಕ ಸಮಿತಿಯು ಮೇಲಿನ ಮಹಿಳಾ ಸಂಘಟನೆಗಳಿಗಿಂತ ಭಿನ್ನವಾಗಿ ಕೆಲಸ ಮಾಡಿತು. ಈ ಸಂಘಟನೆಯು ಆಹಾರ ಕಡಿತ, ರಾಷ್ಟ್ರೀಯ ನಾಯಕರ ಬಿಡುಗಡೆ, ಜಪಾನಿನ ಬಾಂಬ್ ಸ್ಫೋಟಕ್ಕೆ ವಿರೋಧ ಇಂತಹ ಸಮಸ್ಯೆಗಳ ಸುತ್ತ ಮಹಿಳೆಯರನ್ನು ಸಂಘಟಿಸತೊಡಗಿತ್ತು. ಮಹಿಳಾ ಆತ್ಮ ರಕ್ಷಣಾ ಸಮಿತಿ ಹಾಗೂ ಅಖಿಲ ಭಾರತ ಮಹಿಳಾ ಅಧಿವೇಶನದ ಸಂಘಟನೆಗಳು ಕೆಲವು ಸಮಸ್ಯೆಗಳನ್ನು

ಹೋರಾಡಲು ಒಟ್ಟಾಗಿ ಕೆಲಸ ಮಾಡಿದರೂ ಮೂಲ ಭೂತವಾಗಿ ಇವು ಬೇರೆ ಬೇರೆ ವಿಚಾರಧಾರೆಯನ್ನೇ ಹೊಂದಿದ್ದವು. ಆಶಯಗಳು ಸಂಪೂರ್ಣವಾಗಿ ಭಿನ್ನ ವಾಗಿದ್ದವು. ಮಹಿಳಾ ಆತ್ಮರಕ್ಷಣಾ ಸಮಿತಿ ಕಮ್ಯುನಿಸ್ಟ್ ಪಾರ್ಟಿಯ ಅಡಿಯಲ್ಲಿ ಕೆಲಸ ಮಾಡಿದರೆ, ಅಖಿಲ ಭಾರತೀಯ ಮಹಿಳಾ ಅಧಿವೇಶನ ಮುಖ್ಯವಾಗಿ ಕಾಂಗ್ರೆಸ್ ಪಕ್ಷದ ಅಡಿಯಲ್ಲಿ ಉದಾರವಾದೀ ಚೌಕಟ್ಟಿನಲ್ಲಿ ಕೆಲಸ ಮಾಡಿತು. ಕಾನೂನುಗಳಲ್ಲಿ ಬದಲಾವಣೆಯೆ ಇದರ ಮುಖ್ಯ ಗುರಿಯಾಗಿತ್ತು.

ಸ್ವಾತಂತ್ರ್ಯ ನಂತರದಲ್ಲಿ :

ಸ್ವಾತಂತ್ರ್ಯದ ನಂತರದಲ್ಲಿ ಅಖಿಲ ಭಾರತ ಮಹಿಳಾ ಅಧಿವೇಶನ ಸಂಸ್ಥೆ ಹಿಂದೂ ಕೋಡ್‌ಬಿಲ್‌ನಲ್ಲಿ ವಿಶಿಷ್ಟ ಪಾತ್ರ ವಹಿಸಿತು. ಕಾನೂನುಗಳ ಬದಲಾವಣೆಗಳ ವಿಷಯದಲ್ಲಿ ಈ ಸಂಘಟನೆಯ ಪಾತ್ರ ಗಣನೀಯ ವಾದುದು. ಮನೆಯೊಳಗೆ ಸಂಪ್ರದಾಯ ಬದ್ಧ ಮಹಿಳೆಯ ಪಾತ್ರವನ್ನು ಒಪ್ಪಿಕೊಂಡ ಈ ಮಹಿಳಾ ಸಂಸ್ಥೆಯ ಮುಂದಾಳುಗಳು ಕಾನೂನು ಬದಲಾವಣೆಯ ಮೂಲಕ ಅನೇಕ ಸಾಮಾಜಿಕ ಬದಲಾವಣೆ ತರಲು ಪ್ರಯತ್ನಿಸಿದರು. ರಾಜಕೀಯದಲ್ಲಿ ತಮ್ಮ ಪಾತ್ರವನ್ನು ಈ ಮಹಿಳೆಯರು ತಮ್ಮ ಗಂಡಂದಿರಿಗೆ, ಅಣ್ಣಂದಿರಿಗೆ, ತಂದೆಗೆ ಪೂರಕವಾದ ಪಾತ್ರ ಎಂದೇ ನಂಬಿದ್ದರು. ಮಹಿಳೆಯ ಮಹತ್ವ ಕುಟುಂಬ ಹಾಗೂ ಮನೆಯಲ್ಲಿ ಎಂದು ನಂಬಿದ ಇವರು ಲಿಂಗ ಸಂಬಂಧದ ಸಮಸ್ಯೆಗಳನ್ನು ಒಂದು ಪ್ರಶ್ನೆಯಾಗಿ ಪರಿಗಣಿಸಲೇ ಇಲ್ಲ. 1950ರಲ್ಲಿ ಅಖಿಲ ಭಾರತೀಯ ಮಹಿಳಾ ಅಧಿವೇಶನ ಹುಟ್ಟುಹಾಕಿದ ಮಹಿಳಾ ಚಳವಳಿಯ ಪ್ರಭಾವ ಕ್ಷೀಣವಾಯಿತು.

ಮಹಿಳಾ ಆತ್ಮರಕ್ಷಣಾ ಸಮಿತಿ ಕಮ್ಯುನಿಸ್ಟ್ ಪಕ್ಷದ ಹಂದರದಲ್ಲೇ ಮಹಿಳೆಯರನ್ನು ಸಂಘಟಿಸುವುದನ್ನು ಮುಂದುವರೆಸಿತು. 1974ರಲ್ಲಿ ಕಮ್ಯುನಿಸ್ಟ್ ಪಕ್ಷ ಇಬ್ಭಾಗವಾದ ಮೇಲೆ ಅನೇಕ ಕಮ್ಯುನಿಸ್ಟ್ ಮಹಿಳಾ ಸಂಘಟನೆಗಳು ಪಕ್ಷದ ಸಂಘಟನೆಯ ಭಾಗಗಳಾಗಿ ಬೆಳೆದು ಬಂದವು.

ತುರ್ತು ಪರಿಸ್ಥಿತಿ

ಮಹಿಳಾ ಪ್ರಶ್ನೆಗಳು ವಿಶಿಷ್ಟವಾದವು ಎಂಬುದನ್ನು ಗಮನಿಸುವಲ್ಲಿ ಸೋತ ಎಡ ಪಂಥೀಯ ಪಕ್ಷಗಳ ಹಾಗೂ ಇತರ ಪಕ್ಷಗಳ ನಿಲುವೇ ಸ್ವಾಯತ್ತತೆ ಹೊಂದಿದ ಮಹಿಳಾ ಸಂಘಟನೆಗಳ ಉಗಮಕ್ಕೆ ಕಾರಣ. 1974ರಲ್ಲಿ ಸಾರಿದ ತುರ್ತು ಪರಿಸ್ಥಿತಿಯಿಂದಾಗಿ ತುಳಿಯಲ್ಪಟ್ಟ ವರ್ಗಗಳಿಂದ ಅನೇಕ ಚಳುವಳಿಗಳು ಗುಂಪುಗಳು ಹುಟ್ಟಿಕೊಂಡ ಹಾಗೆ ಸ್ವಾಯತ್ತತೆ ಹೊಂದಿದ ಮಹಿಳಾ ಸಂಸ್ಥೆಗಳೂ ಅಸ್ತಿತ್ವಕ್ಕೆ ಬಂದವು. ಎಡ ಪಂಥೀಯ ಪಕ್ಷದೊಳಗಿನ ಸಂಪ್ರದಾಯ ಬದ್ಧತೆಯನ್ನು ಪ್ರಶ್ನಿಸುತ್ತಲೇ ಹುಟ್ಟಿಕೊಂಡ ಅನೇಕ ಸಂಘಟನೆಗಳಲ್ಲಿ ಸ್ವಾಯತ್ತ ಮಹಿಳಾ ಸಂಸ್ಥೆಗಳೂ ಒಂದು. ಎಡ ಪಕ್ಷಗಳೊಳಗೆ ಕ್ರಿಯಾಶೀಲರಾಗಿದ್ದ ಮಹಿಳೆಯರನೇಕರು ಪಕ್ಷದೊಳಗಿನ ಮಹಿಳೆಯ ಸಮಸ್ಯೆಯ ನಿಲುವಿನಿಂದಾಗಿ ಬೇಸತ್ತು ಈಚೆ ಬಂದು ಸ್ವಾಯತ್ತ ಮಹಿಳಾ ಸಂಸ್ಥೆಗಳ ಉಗಮಕ್ಕೆ ಕಾರಣರಾದರು. ಜೊತೆಗೆ ಭಾರತ ಸರ್ಕಾರ 1974ರಲ್ಲಿ 'ಟು ವರ್ಡ್ಸ್ ಈಕ್ವಾಲಿಟಿ' ಎನ್ನುವ ಒಂದು ವರದಿ ಪ್ರಕಟಿಸಿತು. ಈ ವರದಿ ಮೂಲೆ ಗುಂಪಾಗುತ್ತಿರುವ ಮಹಿಳಾ ಸ್ಥಿತಿಯ ಕುರಿತು ಗಮನ ಸೆಳೆದಿತ್ತು. ಕಡಿಮೆಯಾಗುತ್ತಿರುವ ಸ್ತ್ರೀ ಸಂಖ್ಯೆ, ವೈದ್ಯಕೀಯ, ವಿದ್ಯಾಭ್ಯಾಸ, ಕೆಲಸ, ಮಹಿಳಾ ಉದ್ಯೋಗ ಇಂತಹ ಕ್ಷೇತ್ರಗಳಲ್ಲಿ ಹೆಣ್ಣಾಗುತ್ತಿರುವ ತಾರತಮ್ಯ ಕುರಿತಾಗಿ ಈ ವರದಿ ಗಮನ ಸೆಳೆದಿತ್ತು. ಈ ವರದಿಯೂ ಕೂಡಾ ಸ್ವಾಯತ್ತತೆ ಹೊಂದಿದ ಮಹಿಳಾ ಸಂಸ್ಥೆಗಳ ಉಗಮಕ್ಕೆ ಕಾರಣ. 70ನೇ ದಶಕದ ಮಧ್ಯಭಾಗದಿಂದ ಅನೇಕ ಮಹಿಳಾ ಸಂಘಟನೆಗಳು ಅಸ್ತಿತ್ವಕ್ಕೆ ಬಂದಿವೆ. ದೆಹಲಿಯಲ್ಲಿ ಮಾನುಷಿ, ಸಹೇಲಿ, ಸ್ತ್ರೀ ಸಂಘರ್ಷ; ಕಾರ್ಮಿಕ; ಬಾಂಬೆಯಲ್ಲಿ 'ಫೋರಂ ಎಗೆನೆಸ್ಟ್ ಅಪ್ರೆಶನ್ ಆಫ್ ವಿಮೆನ್, ಫಿಮೆನ್ಸ್ ಸೆಂಟರ್, ಮಹಿಳೆ ಮತ್ತು ಮಾಧ್ಯಮ, ಸ್ತ್ರೀ ಮುಕ್ತಿ, ಹೈದರಾಬಾದ್‌ನಲ್ಲಿ ಸ್ತ್ರೀ ಶಕ್ತಿ ಸಂಘಟನ; ಪೂನಾದಲ್ಲಿ ನಾರಿ ಸಮತಾ ಮಂಚ; ಅಹಮದಾಬಾದಿನಲ್ಲಿ ಚಿಂಗೇರಿ, ; ಮದ್ರಾಸ್‌ನಲ್ಲಿ ಪೆಣುರಿಮೈ ಇಯಕಮ್, ಬೆಂಗಳೂರಿನಲ್ಲಿ ಮಾನಿನಿ,ವಿಮೋಚನ,ಅಚಲ ಮಾನಸ; ಮೈಸೂರಿನಲ್ಲಿ ಸಮತ; ಕಲ್ಕತ್ತದಲ್ಲಿ ನಿಚೇತನ ಮತ್ತು ಸಬಲ, ಪಾಟ್ನಾದಲ್ಲಿ ಅಜೈವಿಕ; ಮಹಾರಾಷ್ಟ್ರದಲ್ಲಿ ಬೈಜಾ, ಪಂಜಾಬ್‌ನಲ್ಲಿ ವಿಮೆನ್ಸ್ ಅಂಡ್ ಶಾಕಲ್ಸ್' ಈ ಮಹಿಳಾ ಸಂಘಟನೆಗಳು ಯಾವುದೇ ರಾಜಕೀಯ ಪಕ್ಷದಡಿ ಕೆಲಸ ಮಾಡುತ್ತಿಲ್ಲ. ನಿರ್ಧಾರ ಮಾಡುವ ವಿಚಾರದಿಂದ ಹಿಡಿದು ಸಂಘಟನೆಗಳಲ್ಲಿ ಇರುವ 'ಅಧಿಕಾರ'ದ ಸ್ಥಾನಗಳ

ಶ್ರೇಣೀಕೃತ ವ್ಯವಸ್ಥೆ ಪ್ರಶ್ನಿಸುವ ಈ ಗುಂಪುಗಳು ಒಟ್ಟಾಗಿ ಕೆಲಸ ಮಾಡುವ. ಒಟ್ಟಾಗಿ ನಿರ್ಧಾರ ಮಾಡು ವಂತಹ ಪರ್ಯಾಯ ವ್ಯವಸ್ಥೆಯನ್ನು ಹುಟ್ಟು ಹಾಕಲು ಪ್ರಯತ್ನಿಸುತ್ತಿವೆ. ಮಹಿಳೆಯರ ಸಮಸ್ಯೆಗಳು ವಿಶಿಷ್ಟ ವಾದವು ಎಂದು ಭಾವಿಸುವ ಈ ಸಂಘಟನೆಗಳು ಜಾತಿ, ವರ್ಗದ ಜೊತೆಗೆ ಪಿತೃ ಪ್ರದಾನ ಮೌಲ್ಯ ಹೇರಿರುವ ಮೌಲ್ಯಗಳ ವಿರುದ್ಧದ ಹೋರಾಟದಲ್ಲಿ ಮಹಿಳೆಯರನ್ನು ಸಂಘಟಿಸುವ ಪ್ರಯತ್ನ ಮಾಡುತ್ತಿವೆ.

ರಾಷ್ಟ್ರೀಯ ಮಹಿಳಾ ಸಮ್ಮೇಳನಗಳು

ಈಗ 1993ರಲ್ಲಿ ಈ ಸಂಘಟನೆಗಳ ಐದನೆಯ ರಾಷ್ಟ್ರೀಯ ಮಟ್ಟದ ಅಧಿವೇಶನ ನಡೆಯಬೇಕಿದೆ. ಈ ಸಮ್ಮೇಳನ ನಡೆಯುವುದಕ್ಕೆ ಮುನ್ನ ಇಲ್ಲಿಯವರೆಗೆ ನಡೆದ ಸಮ್ಮೇಳನಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ಸ್ವಾಯತ್ತ ಮಹಿಳಾ ಸಂಘಟನೆಗಳ ಮೊದಲ ಅಧಿವೇಶನ ನಡೆದದ್ದು 1980ರಲ್ಲಿ. ಇದು ನಡೆದದ್ದು ಬಾಂಬೆಯಲ್ಲಿ. ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದ ಮಥುರಾ ಅತ್ಯಾಚಾರದ ಘಟನೆ ಆಗ ಹೆಚ್ಚು ಚರ್ಚೆ, ಪ್ರತಿಭಟನೆಯನ್ನು ಒಳಗೊಂಡಿದ್ದರಿಂದ ಮೊದಲ ಅಧಿ ವೇಶನದಲ್ಲಿ ಅತ್ಯಾಚಾರ ಹಾಗೂ ಅದಕ್ಕೆ ಸಂಬಂಧಪಟ್ಟ ಕಾನೂನುಗಳ ಬದಲಾವಣೆ ಕುರಿತು ಹೆಚ್ಚು ಗಮನ ಹರಿಸ ಲಾಯಿತು. ಈ ಅಧಿವೇಶನದ ಮುಖ್ಯ ಉದ್ದೇಶ ಭಾರತ ದಲ್ಲಿ ಮಹಿಳಾ ಹಕ್ಕುಗಳಿಗಾಗಿ ಕೆಲಸ ಮಾಡುವ ಎಲ್ಲಾ ಮಹಿಳೆಯರೂ ಒಟ್ಟುಗೂಡಿ ಒಟ್ಟಾಗಿ ಅತ್ಯಾಚಾರ ಹಾಗೂ ಅದಕ್ಕೆ ಸಂಬಂಧಪಟ್ಟ ಕಾನೂನು ಬದಲಾವಣೆ ಗಳ ಬಗ್ಗೆ ಧ್ವನಿ ಎತ್ತಿ ಹೋರಾಡುವುದಾಗಿತ್ತು.

ರಾಷ್ಟ್ರೀಯ ಮಹಿಳಾ ಅಧಿವೇಶನ ಎರಡನೇಬಾರಿಯೂ ಬಾಂಬೆಯಲ್ಲಿಯೇ ನಡೆಯಿತು. ಈ ಅಧಿವೇಶನದಲ್ಲಿ ಸ್ವಾಯತ್ತ ಸಂಘಟನೆಗಳ ಅನುಭವಗಳು ಹಾಗೂ ಅವರ ಮಿತಿ ಕುರಿತು ಚರ್ಚೆ ನಡೆಸಲಾಯಿತು. ವ್ಯಕ್ತಿಗಳಿಗೆ ಸಹಾಯ ನೀಡುವುದು, ಮಹಿಳಾ ಪ್ರಜ್ಞೆ ವಿಸ್ತರಿಸಲು ರಾಜ್ಯದಾದ್ಯಂತ ಒಂದು ರೀತಿ ವಿಚಾರ ವಿನಿಮಯ ಸಂಪರ್ಕ ಏರ್ಪಡಿಸಿಕೊಳ್ಳಲು ನಿರ್ಧರಿಸಲಾಯಿತು.

ಈ ಎರಡು ಅಧಿವೇಶನಗಳು ಚಿಕ್ಕ ಪ್ರಮಾಣದಲ್ಲಿ ನಡೆ ದವು. ಮೊದಲನೆಯ ಅಧಿವೇಶನದಲ್ಲಿ 400 ಮಹಿಳೆ ಯರು ಭಾಗವಹಿಸಿದ್ದರು. ಭಾಗವಹಿಸಿದ್ದ ಮಹಿಳೆಯ ರೆಲ್ಲಾ ಪಟ್ಟಣವಾಸಿಗಳು. ಈ ಎರಡೂ ಅಧಿವೇಶನವನ್ನು ಚಿಕ್ಕ ಚಿಕ್ಕ ಗುಂಪುಗಳಲ್ಲಿ ಚರ್ಚೆ, ಹಾಗೂ ಕೆಲವು ವಿಷಯ ಗಳಿಗೆ ಸಂಬಂಧಪಟ್ಟಂತೆ ಪರಿಣತರಿಗೆ ಮಾತನಾಡುವ, ಸುಮಾರು ಮಹಿಳೆಯರಿಗೆ ಅನುಭವ ಹಂಚಿಕೊಳ್ಳಲು ಅವಕಾಶ ಮಾಡಲಾಗಿತ್ತು.

ಮೂರನೆಯ ಹಾಗೂ ನಾಲ್ಕನೆಯ ಅಧಿವೇಶನಗಳು ಮೇಲಿನ ಎರಡು ಅಧಿವೇಶನಗಳಿಗಿಂತಲೂ ಭಿನ್ನವಾಗಿದ್ದವು. ಪಾಟ್ನಾದಲ್ಲಿ ಮೂರನೆಯ ಅಧಿವೇಶನ ನಡೆಯಿತು. ಇಲ್ಲಿ ಸುಮಾರು 700 ಮಹಿಳೆಯರು ಭಾಗವಹಿಸಿದ್ದರು. ಇವ ರಲ್ಲಿ ಹೆಚ್ಚು ಜನ ಹಳ್ಳಿಗಾಡು ಹೆಂಗಸರು. ಬಿಹಾರದಲ್ಲಿ ಅಲ್ಲಿನ ಮಹಿಳಾ ಗುಂಪುಗಳು ಅಲ್ಲಿನ ಮಹಿಳೆಯರಿಗೆ ವಿರುದ್ಧವಾದ ಸರ್ಕಾರಿ ಯೋಜನೆ, ಕಾನೂನುಗಳ ವಿರುದ್ಧ ತೀವ್ರವಾಗಿ ಹೋರಾಡುತ್ತಿದ್ದರಿಂದ, ಹಾಗೂ ಬಿಹಾರ ದಲ್ಲಿ ಮಹಿಳಾ ಪ್ರಜ್ಞೆ ರೂಪಿಸಲು ಪ್ರಯತ್ನಿಸುತ್ತಿದ್ದ ರಿಂದ ಬಿಹಾರದಲ್ಲಿಯೇ ಈ ಅಧಿವೇಶನ ನಡೆಸಲು ತೀರ್ಮಾನಿಸಲಾಯಿತು. ಪಿತೃ ಪ್ರಧಾನ ಮೌಲ್ಯ, ಪರಿಸರ ಮಾಲಿನ್ಯ, ಹಣ ಕಾಸು, ಮಾಧ್ಯಮ, ಹಿಂಸೆ, ಆರೋಗ್ಯ ಇಂತಹ ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚಿಸಲಾಯಿತು.

ಕ್ಯಾಲಿಕಟ್‌ನಲ್ಲಿ ನಾಲ್ಕನೆಯ ಸಮ್ಮೇಳನ ನಡೆಸ ಲಾಯಿತು. ಇಲ್ಲಿ ಈ ಅಧಿವೇಶನಕ್ಕೆ ಮೂಲ ಕಾರಣ ಎಂ.ಎಲ್. ಮಾರ್ಕ್ಸಿಸ್ಟ್ ಗುಂಪಿನಿಂದ ಈಚೆ ಬಂದ ಅಜಿತ. ಈಕೆ ಮಾರ್ಕ್ಸಿಸ್ಟ್ ವಲಯದಲ್ಲಿ ಸುಮಾರು ಜನರಿಗೆ ಪರಿಚಿತ. ಬಹಳ ವರ್ಷಗಳು ಈಕೆ ಎಂ.ಎಲ್. ಗುಂಪಿನಲ್ಲಿ ಕ್ರಿಯಾಶೀಲಳಾಗಿದ್ದ ಮಹಿಳೆ. ಪಕ್ಷದೊಳಗಿನ ಮಹಿಳೆಯ ಬಗ್ಗೆಗಿನ ನಡತೆಯಿಂದಾಗಿ ಬೇಸತ್ತ ಈಕೆ ಈಗ ಪುಟ್ಟ ಮಹಿಳಾ ಸಂಘಟನೆ ಕಟ್ಟಿದ್ದಾರೆ. ಎಡ ಪಂಥೀಯ ರಾಜಕೀಯದ ಲಯಗಳು ಜೀವನಾಡಿ ಹಿಡಿದಿರುವ ಕೇರಳ ದಲ್ಲಿಯೇ ಈ ಸಮ್ಮೇಳನ ನಡೆಯಬೇಕು ಎಂಬುದಾಗಿ ಕೊನೆಗೆ ಕ್ಯಾಲಿಕಟ್‌ನಲ್ಲಿ ಈ ಸಮ್ಮೇಳನ ನಡೆಯಲು ಈಕೆ ಸ್ಫೂರ್ತಿಯಾದರು. 1990ರಲ್ಲಿ ಈ ಅಧಿವೇಶನ ನಡೆ ಯಿತು. ಇಲ್ಲಿ ಭಾಗವಹಿಸಿದ ಮಹಿಳೆಯರು ಹಳ್ಳಿಗಾಡಿನ ಮಹಿಳೆಯರೇ. ಸುಮಾರು 2000ದಷ್ಟು ಮಹಿಳೆಯರು

ಈ ಅಧಿವೇಶನದಲ್ಲಿ ಭಾಗವಹಿಸಿದ್ದರು. ಕೋಮುವಾದದ ಬಗ್ಗೆ, ಮಹಿಳೆಯರಿಗೆ ಇದರಿಂದ ಆಗುತ್ತಿರುವ ಪರಿಣಾಮ ಕುರಿತೂ ಇಲ್ಲಿ ಹೆಚ್ಚಿನ ಮಟ್ಟಿಗೆ ಚರ್ಚಿಸಲಾಯಿತು.

ಐದನೆಯ ರಾಷ್ಟ್ರೀಯ ಮಹಿಳಾ ಸಮ್ಮೇಳನಕ್ಕಾಗಿ ಸಿದ್ಧತೆಯ ಮೊದಲ ಸಭೆಯನ್ನು ಮದ್ರಾಸ್‌ನಲ್ಲಿ ಕರೆಯಲಾಗಿತ್ತು. 'Personal is Political' ಎಂಬ ವಸ್ತುವಿನ ಸುತ್ತವೇ ಐದನೆಯ ಅಧಿವೇಶನ ನಡೆಸಬೇಕೆಂದು ಒಂದು ಸಲಹೆ ನೀಡಲಾಯಿತು. ಆದರೆ ಬಾಂಬೆಯ 'ಫೋರಂ ಎಗೇನೆಸ್ಟ್ ಅಪ್ರೆಶನ್ ಆಫ್ ವಿಮೆನ್' ಸಂಘಟನೆಯವರು ಈ ದೃಷ್ಟಿಕೋನ ಮಿತಿಯುಳ್ಳದ್ದಾಗುತ್ತಿದೆ ಎಂದು ಅಭಿಪ್ರಾಯ ಪಟ್ಟರು. ಚಳುವಳಿಯಲ್ಲಿ, ಅಧಿವೇಶನದಲ್ಲಿ ವ್ಯಕ್ತಿಗಳು ಭಾಗಿಗಳಾದರೂ, ಕೊನೆಯದಾಗಿ ಒಗ್ಗೂಡಿ ಮಾಡಿದ ಪ್ರಯತ್ನಗಳೇ ಹೆಚ್ಚು ಮಹತ್ವವುಳ್ಳವುಗಳಾಗುತ್ತವೆ. ಮಹಿಳಾ ಅಧಿವೇಶನ ಸಂಘಟಿತ ಹಾಗೂ ಒಕ್ಕೂಟದ ಪ್ರಯತ್ನಗಳಿಗೆ ಹೆಚ್ಚು ಒತ್ತು ನೀಡಬೇಕು ಎಂಬುದು ಬಹು ಜನರ ಅಭಿಪ್ರಾಯವಾಗಿತ್ತು. ಮಹಿಳಾ ಚಳುವಳಿಯಲ್ಲಿ ಹಾಗೂ ಅಧಿವೇಶನದಲ್ಲಿ ಭಾಗಿಗಳಾಗಿರುವ ನಮ್ಮ ಭಾಗವಹಿಸುವಿಕೆಯ 'ವೈಯುಕ್ತಿಕ'-ಅರ್ಥ ಹೆಚ್ಚು ವಿಶಾಲವಾದದ್ದು ಎಂಬ ಅಭಿಪ್ರಾಯವೂ ಇಲ್ಲಿ ಮೂಡಿ ಬಂತು. ಈ ಹಂತದಲ್ಲಿ ನಮ್ಮ ಹುಡುಕಾಟ, ಅಸ್ತಿತ್ವ ಕೂಡಾ ಸಂಘಟನೆಯೊಳಗಿನದಾಗಿರುತ್ತದೆ. ಹಾಗಾಗಿ ಸಂಘಟಿತ ಪ್ರಯತ್ನಗಳಿಗೆ, ಸಮುದಾಯ ಸಮಸ್ಯೆಗಳಿಗೆ ಹೆಚ್ಚು ಒತ್ತು ನೀಡಬೇಕೆಂಬ ಅಭಿಪ್ರಾಯ ಇಲ್ಲಿ ವ್ಯಕ್ತವಾಯಿತು.

ಆಯಾ ಪ್ರದೇಶಗಳಿಗೆ, ರಾಜ್ಯಗಳಿಗೆ ಸಂಬಂಧಿಸಿದ ಮಹಿಳಾ ಸಮಸ್ಯೆಯ ವಿಶಿಷ್ಟತೆ ಒಳಗೊಳ್ಳಲು ಈ ಐದನೆಯ ಅಧಿವೇಶನಕ್ಕೆ ಮುನ್ನ ಆಯಾ ರಾಜ್ಯದಲ್ಲಿ ರಾಜ್ಯ ಮಟ್ಟದ ಸಭೆ ಮಾಡಿ ಈ ಬಗ್ಗೆ ಚರ್ಚಿಸಬೇಕು ಎಂಬ ಸಲಹೆ ಮೂಡಿ ಬಂತು.

ಈ ಎಲ್ಲದರ ಹಿನ್ನೆಲೆಯಲ್ಲಿಯೇ ಬೆಂಗಳೂರಿನಲ್ಲಿ ಕೆಲಸ ಮಾಡುವ ಮಹಿಳಾ ಸಂಘಟನೆಗಳು ಡಿಸೆಂಬರ್ 6 ರಂದು ರಾಜ್ಯಮಟ್ಟದ ಸಭೆಯನ್ನು ಕರೆದಿವೆ. ಈ ಸಿದ್ಧತೆಯ ಸಭೆ ಮುಂದೆ ಕರ್ನಾಟಕದಲ್ಲಿ ಕೆಲವಾರು ಸಂಸ್ಥೆಗಳಾದರೂ ಒಟ್ಟಾಗಿ ಕೆಲಸ ಮಾಡಿ ಚಳುವಳಿಗೆ ಒಂದು ನಿರ್ದಿಷ್ಟರೂಪ ನೀಡುವಲ್ಲಿ ಸ್ಫೂರ್ತಿಯಾದೀತೇನೋ ಎಂಬ ಭರವಸೆ. ನಿಮ್ಮ, ನಮ್ಮ ಸಂಘಟನೆಯ ಅನುಭವಗಳನ್ನು ಹಂಚಿಕೊಳ್ಳುವ ಮೂಲಕವೇ ನೀವು/ನಾವು ಕರ್ನಾಟಕದಲ್ಲಿ ಮಹಿಳಾ ಚಳುವಳಿ ರೂಪಿಸುವಲ್ಲಿ ಒಂದು ಹೆಜ್ಜೆಯಾದರೂ ಮುಂದಿಡಬಹುದೇನೋ ?

—ಎಚ್. ಎಸ್. ಸಿ.

> **ಸಭೆ :** 6ನೇ ತಾರೀಖ್ ಡಿಸೆಂಬರ್ 1992
> ಬೆಳಗ್ಗೆ 9. 30 ರಿಂದ ಸಂಜೆ 5ರವರೆಗೆ
> **ಸ್ಥಳ :** ಇಂಡಿಯನ್ ಸೋಷಿಯಲ್
> ಇನ್‌ಸ್ಟಿಟ್ಯೂಟ್
> 24, ಬೆನ್‌ಸನ್ ಟೌನ್ ರೋಡ್
> ಬೆನ್‌ಸನ್ ಟೌನ್, ಬೆಂಗಳೂರು-560046
> ಫೋನ್–575189

ನಾನೊಂದು ದೀಪ

ಅಮ್ಮ ಹೇಳುತ್ತಿದ್ದಳು, "ನೀನೊಂದು ದೀಪ
ಪರಮನೆಯ ಬೆಳಗುವ ಕಾಂತಿ ಸ್ವರೂಪ
ಬೆಳಕನೊಂದ ಕಂಡು ಕುಣಿಯುತ್ತಿದ್ದೆನಾಗ
ಹಾಡಿಕೊಂಡು ರಾಗ ; ನಾನೊಂದು ದೀಪ ನಾನೊಂದು ದೀಪ...
ಮಂಜಹನಿಯು ಕರಗುವಂತೆ
ಬಾಲ್ಯ ಕರಗಿ ಹೋಗಲು ಯೌವನದ ಸೆರೆ
ಸುತ್ತ ಕಟ್ಟಿ ದಿನ ತೆವಳ ತೊಡಗಲು
ಒಳಕೋಣೆಯಲ್ಲಿರುವ ದೀಪವನ್ನು
ನಿತ್ಯನಿತ್ಯವೂ ನೋಡಿದೆ ಹರಡಿದ ಬೆಳಕನ್ನು
ಅರಳಿದ್ದ ಕಂಗಳಲ್ಲಿ ಮೂಡಿತ್ತು ಕಾಮನಬಿಲ್ಲು
ಹೊಸನಂಟು ಬೆಳೆದು ಬೇಗ
ಹಿಂದಾಗಲು ಹಳೆಯ ರಾಗ
ಸಂಸಾರದ ನೊಗ ಹೊತ್ತು ತತ್ತರಿಸಿತ್ತು ದೇಹ
ಅಮ್ಮನೆಂದ ನುಡಿಯ ಅರ್ಥ ಆಗಿತ್ತು ಆಗ
ನೀನೆಂದಂತೆ, ನಾನೊಂದು ದೀಪ
ಎಣ್ಣೆಯಲ್ಲಿ ಮುಳುಗಿ
ಉರಿಯಲ್ಲಿ ಸುಟ್ಟುಕೊಳ್ಳುತ್ತಾ
ಬೆಳಕ ಹರಡುವ ಬತ್ತಿ ಮೈ ನಾನು
ವಿದ್ಯುತ್ ಹರಿಯುವ ಈ ಕಾಲದಲ್ಲೂ
ನನ್ನ ಈ ರೀತಿ ಬದಲಾಗದು.

—ಎಂ. ಎಚ್. ಲಕ್ಷ್ಮಿ
ಬೆಂಗಳೂರು

ಸಾವಿನ ನೆರಳು

"ಕಾಲ ಎಲ್ಲಾ ಮರೆಸುತ್ತೆ", ಯಾವ ಗಾಯವಾದರೂ, ಅದನ್ನು ಮರೆಸುವ ಶಕ್ತಿ ಕಾಲಕ್ಕಿದೆ. ಸಾವಿನ ಸಂಬಂಧದಲ್ಲಿ ಎಲ್ಲರೂ ಹೇಳುವ ಮಾತಿದು. ಆದ್ರೆ ಕಾಲ ಸಾವಿನ ನೋವನ್ನು ಮಾಸುತ್ತದೆಯೆ ? ಅದಕ್ಕೆ ಆಶಕ್ತಿ ಇದೆಯೇ? ಆ ಮಾಂತ್ರಿಕತೆ ಕಾಲಕ್ಕಿದ್ದರೂ ಎಷ್ಟರ ಮಟ್ಟಿಗೆ ?

ಒಳಗೊಳಗೆ ಮಡುಗಟ್ಟಿದ ನೋವು ಒಮ್ಮೆಲೇ ಸಿಡಿದು ಉಂಟುಮಾಡುವ ಖಿನ್ನತೆ—ಉಸಿರಿಲ್ಲದ ನಿಶ್ಚಲವಾದ ತಣ್ಣನೆಯ ದೇಹ ಎದುರಿಗಿದ್ದಾಗ ಉಂಟುಮಾಡುವ ನೋವಿಗಿಂತ ತೀವ್ರವಾದದ್ದು. ಏಕಾಂತದಲ್ಲಿ ಇದ್ದಕ್ಕಿದ್ದಂತೆ ಮುಖಾಮುಖಿಯಾಗುವ 'ಸಾವು' ಕಳೆದುಕೊಂಡುದರ ನೆನಪು, ವಾಸ್ತವವಾದ ಸಾವಿಗಿಂತ ಕ್ರೂರವಾದದ್ದು, ಘೋರವಾದದ್ದು. ಕಾಲ ಸರಿದರೂ, ಗಾಯ ಮಾಸಿದೆಯೆ ? ಗೊತ್ತಿಲ್ಲ. ಯಾವುದೇ ವಿಶ್ಲೇಷಣೆಯ ತೆಕ್ಕೆಗೆ ನಿಲುಕದ, ಅರಗಿಸಿಕೊಳ್ಳಲಾಗದ ಈ ಸಾವಿನ ನೆನಪು, ಒಂದು ಕ್ಷಣದಲ್ಲಿ ನನ್ನನ್ನು ಅದಿರಿಸುತ್ತವೆ.

ಈ ಬರುವ ಸಂಕ್ರಾಂತಿಗೆ ಆರುವರ್ಷಗಳಾದವು. ಹಾರೋಹಳ್ಳಿಯ ಪುಟ್ಟದಾದ ಹಂಚಿನ ಮನೆಯಲ್ಲಿ ತನಗಾದ ಅನ್ಯಾಯ ನೋವುಗಳಿಗೆ ಚಾರಿತ್ರಿಕ ಹೆಜ್ಜೆಗಳ ಜಾಡನ್ನು ಹಿಡಿದು ಹೋರಾಡಿದ ಜೀವವೊಂದು ಶವವಾಗಿ ಮಲಗಿತ್ತು. ತೆರೆದ ಬಾಯಿ, ಹೊರಕಾಣುತ್ತಿದ್ದ ಹಲ್ಲುಗಳು, ಈಗ ಎದ್ದು ಮಾತನಾಡುತ್ತಾರೊ ಎಂಬಂತ ಮುಖದ ಛಾಯೆ, ಹೂಗಳಿಂದ ಆವೃತವಾದ ದೇಹದಲ್ಲಿ ಕಾಣಿಸುತ್ತಿದ್ದುದು ಮುಖ ಮತ್ತು ಕಾಲುಗಳು. ಹಚ್ಚಿಟ್ಟಿದ್ದ ಊದುಬತ್ತಿಯ ವಾಸನೆ, ದುಃಖತಪ್ತರಾದ ಮಕ್ಕಳ ಮುಖ, ಬಿದ್ದು ಅಳುವ ಹೆಂಗಸರಿಲ್ಲ. ಸಮಾಧಾನದ ಮಾತುಗಳನ್ನಾಡುವ ಹಿರಿಯರಿಲ್ಲ. ಸಾವು, ಸಾವೆಂದೆನಿಸಲಿಲ್ಲ.

ಮನೆಯ ಮುಂದೆ ಜನರ ಗುಂಪು. ಸೇರಿದವರು ಮುಂದಿನ ಕಾರ್ಯದತ್ತ ಚರ್ಚಿಸುತ್ತಿದ್ದರು. ಕುಡಿದ ಗಂಡ ಕೆಂಗಣ್ಣನ್ನು ಬಿಡುತ್ತಾ, ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಓಡಾಡುತ್ತಿದ್ದ. ಮುಖದ ಮೇಲೆ ಕೈಯಾಡಿಸಿದೆ. ತಣ್ಣಗೆ ಕೊರೆಯುತ್ತಿತ್ತು. ಸಪೂರ ದೇಹದ, ಎತ್ತರದ ನಿಲುವಿನ ಸಿಸಿಲಿಯಮ್ಮ ನೀಟಾಗಿ ಸೀರೆಯುಡುತ್ತಿದ್ದು, ಕೂದಲನ್ನು ಎತ್ತರಕ್ಕೆ ಬಾಚಿ ಗಂಟು ಹಾಕಿಕೊಂಡು, ಬಗಲಲ್ಲೊಂದು ವ್ಯಾನಿಟಿ ಬ್ಯಾಗ್ ಇಟ್ಟುಕೊಂಡು ಪುಟಪುಟನೆ ಓಡಾಡುತ್ತಿದ್ದರು. ಆದರೆ ಇಂದು ಆಕೆ ಇಲ್ಲ. ಆಕೆಯ ಶವವೂ ಇಲ್ಲ, ಆದರೆ ಕಣ್ಣಿಗೆ ಕೊರೆಯುವ ನೆನಪು ಮಾತ್ರ.

ಸಿಸಿಲಿಯಮ್ಮ ಗಂಡನಿಂದ ವಂಚಿತಳಾದ ಹೆಂಗಸು. ಮದುವೆಯಾದಂದಿನಿಂದ ಗಂಡನಿಂದ ಯಾವ ಸುಖವನ್ನು ಪಡೆಯಲಿಲ್ಲ. ಮದುವೆಯಾಗಿ ಎರಡನೆಯ ಮಗು ಹುಟ್ಟಿದಾಗ ಗಂಡನ ಕ್ರೂರತೆಯ ಪರಿಚಯವಿದ್ದ ಆಕೆ. ದಾದಿ ವೃತ್ತಿಯ ತರಬೇತಿಗೆ ಸೇರಿ,, ನಂತರ ಸ್ವಾವಲಂಬಿಯಾಗಿಯೇ ಬದುಕಿದವಳು. ಮೂರು ಮಕ್ಕಳನ್ನು ಮಡಿಲಲ್ಲಿ ಇಟ್ಟುಕೊಂಡೇ ಕೇರಳ ಬಿಟ್ಟು ಕರ್ನಾಟಕಕ್ಕೆ ಬಂದು ವೃತ್ತಿಯನ್ನು ಪ್ರಾರಂಭಿಸಿ, ಕೊನೆಗೆ ಒಂದು ನೆಲೆಯನ್ನು ತಲುಪಿದ್ದಳು ಆಕೆ. ಆಕೆಯಿಂದ ದೂರವಾದ ಗಂಡ, ಬೇರೆ ಹೆಂಗಸಿನೊಂದಿಗೆ ಸಂಸಾರ ಮಾಡಿಕೊಂಡು ಎಲ್ಲೋ ಮರೆಯಾಗಿದ್ದ.

ಮೊದ ಮೊದಲು ಹೆಂಡತಿಯ ಎದುರಿಗೆ ನಡೆಯುತ್ತಿದ್ದ ಅವನ ಲೀಲೆಗಳನ್ನು ಹೆಂಡತಿ ಸಹಿಸದಾದಾಗ ಗಂಡ ಹಿಂಸೆಯ ದಾರಿ ಹಿಡಿದ. ಕೊನೆಗೊಮ್ಮೆ ಊರಿನಿಂದ ಮರೆಯಾದ. ತನಗೂ ತನ್ನ ಮಕ್ಕಳಿಗೂ ವಂಚಿಸಿದ 'ಆತನನ್ನು' ನಿರ್ಲಕ್ಷಿಸುವ ಹಂತದಲ್ಲಿ ಆಕೆ ಇರಲಿಲ್ಲ. ಕಂಡಕಂಡವರ ಕೈಕಾಲಿಡಿದು ಗಂಡನ ವಿಳಾಸವನ್ನು ಪತ್ತೆ ಹಚ್ಚಿ ಆತನಿಗೆ ವಕೀಲರಿಂದ ನೋಟೀಸ್ ಕೊಡಿಸಿದಳು. ಕೇಸ್ ಇವರ ಪರವಾಗಿ ತೀರ್ಮಾನವಾಗುವ ಹಂತದಲ್ಲಿತ್ತು. ದಾಖಲೆಗಳನ್ನು ಪ್ರಾಣದಂತೆ ಕಾಪಾಡಿಕೊಂಡು ಎದೆಯಲ್ಲಿ ಬಚ್ಚಿಟ್ಟುಕೊಂಡಿದ್ದರು.

ಆದರೆ ನಡೆದದ್ದು ಕಲ್ಪನೆಗೂ ಮೀರಿದ್ದು. ನ್ಯಾಯಾಲಯದಲ್ಲಿ ಹೋರಾಡಲಾಗದ ಗಂಡ ಹಿಡಿದ ದಾರಿಯೇ ಬೇರೆಯೆಂದೆನಿಸುತ್ತದೆ. ಹಾದಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ಕರೆದು ಮೃತ್ಯುವಿಗೆ ಮಣೆ ಹಾಕಿದರು. ಸರ

ಗಲ್ಲಿಯೇ ಸಾವನ್ನು ಕಟ್ಟಿಕೊಂಡು ಅದರ ಪರಿವೆಯಿಲ್ಲದೆ ಕುರುಡಾಗಿದ್ದರು. ತಮ್ಮ ತಾವು ಬಲಿಕೊಡುತ್ತಿರುವುದರ ಅರಿವೂ ಅವರಿಗುಂಟಾಗಲಿಲ್ಲ. ಮನೆಯ ಮೇಲಿನ ಸೂರು ಕುಸಿದು ಬಿತ್ತು. ತಾಯಿಯ ರೆಕ್ಕೆಯ ಅಡಿಯಲ್ಲಿ ಕಣ್ತೆರೆಯದೇ ಬೆಚ್ಚಗೆ ಮಲಗಿದ್ದ ಮಕ್ಕಳು ಬೀದಿಯಲ್ಲಿ ಬಿದ್ದವು. ಹೊರ ಜಗತ್ತಿನ ಕ್ರೂರತೆಯ ಮಗ್ಗುಲಿನ ಪರಿಚಯವಿಲ್ಲದ ಎಳೆಯ ಜೀವಿಗಳು ಕತ್ತಲಲ್ಲಿ ತಡಕಾಡುವಂತಾಯಿತು.

ಸಿಸಿಲಿಯಮ್ಮ ಗಂಡನ ನೆರವಿಲ್ಲದೆ, ಒಬ್ಬಂಟಿಯಾಗಿ ಎಳೆಮಕ್ಕಳನ್ನು ಸಾಕಿದ್ದರು. ವರ್ಷಾನುಗಟ್ಟಲೆ ಗಂಡು ಹೆಣ್ಣಿನ ಪಾತ್ರವನ್ನು ಅವರೇ ನಿರ್ವಹಿಸಿದ್ದರು. ಅನುಭವ ಅವರ ಹೃದಯದ ವೈಶಾಲ್ಯತೆಯನ್ನು ಹೆಚ್ಚಿಸಿತ್ತು. ಬೆಳೆಯುತ್ತಿದ್ದ ಮಕ್ಕಳು ಅವರಿಗೆ ಸ್ನೇಹಿತರಾಗಿದ್ದರು. ಮನೆಯೊಳಗಿನ ಮತ್ತು ಮಕ್ಕಳ ಜವಾಬ್ದಾರಿ, ನರ್ಸ ಕೆಲಸ, ಗಂಡನ ವಿರುದ್ಧ ನ್ಯಾಯಾಲಯದಲ್ಲಿ ಹೂಡಿದ ದಾವೆಯ ಕೆಲಸ, ಯಾವುವೂ ಅವರನ್ನು ಕುಗ್ಗಿಸಿರಲಿಲ್ಲ. ಎಲ್ಲವನ್ನೂ ಎಳೆಎಳೆಯಾಗಿ ಹೆಣೆದು ಗೂಡು ಕಟ್ಟಿದ ಸಿಸಿಲಿಯಮ್ಮ ಶವವಾಗಿ ಮಲಗಿದ್ದಳು.

ಗಂಡನಿಂದ ವಂಚಿತಳಾದ ಸಿಸಿಲಿಯಮ್ಮ ಯಾವ ಕೊರತೆಯುಂಟಾಗದಂತೆ ಮಕ್ಕಳಿಗೆ ಆಸರೆಯಾಗಿದ್ದರು. ಹಗಲು, ರಾತ್ರಿಗಳೆನ್ನದೆ, ಬೆವರು ಸುರಿಸಿ ಇಟ್ಟಿಗೆ ಮೇಲೆ ಇಟ್ಟಿಗೆಯನ್ನು ಜೋಡಿಸಿ ಕಟ್ಟಿದ ಮನೆ. ಮನೆಗಳು ದೊಪ್ಪನೆ ಕುಸಿದು ಬಿದ್ದವು. ಕುಂಬಾರನಿಗೆ ಒಂದು ವರ್ಷ, ದೊಣ್ಣೆಗೆ ಒಂದು ನಿಮಿಷ.

ಗಂಡ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಯನ್ನು ಹೊಡೆದಿದ್ದ. ಹೆಂಡತಿ ಸತ್ತ ನಂತರ ಆವನ ಹಾದಿ ಸುಲಲಿತವಾಯಿತು. ಇರುವುದನ್ನೆಲ್ಲಾ ಬಾಚಿಕೊಂಡು ಹಾರಿ ಹೋದ. ಅವನನ್ನು ಕರುಳ ಬಳ್ಳಿಯ ಮೋಹ ಬಂದಿಸಲಿಲ್ಲ. ಯಾವಾಗಲೂ ಬಂಧಿಸಿಯೂ ಇರಲಿಲ್ಲ. ಆಸರೆ ತಪ್ಪಿದ ಮಕ್ಕಳು ದೈನಂದಿನ ಕ್ರೂರ ಬದುಕಿನೊಂದಿಗೆ ಅಂಬೆಗಾಲಿಡುವುದನ್ನು ಕಲಿಯುವುದು ಅನಿವಾರ್ಯವಾಯಿತು. ಹಿರಿಯ ಮಗಳು ಇಂದು ಬೆಳೆದು ದೊಡ್ಡವಳಾಗಿದ್ದಾಳೆ. ಒಮ್ಮೊಮ್ಮೆ ತಾಯಿಯ ಸೀರೆಯನ್ನೇ ಉಡುತ್ತಾಳೆ. ಅವಳನ್ನು ನೋಡಿದರೆ ಸಿಸಿಲಿಯಮ್ಮನೇ ಎಂಬ ಭ್ರಮೆ ಉಂಟಾಗುತ್ತದೆ. ಮೂವರು ಮಕ್ಕಳ ದಾರಿ ಕವಲೊಡೆಯಿತು.

ಅಂದು ಬಿರು ಬಿಸಿಲು. ಸೂರ್ಯ ನೆತ್ತಿಯ ಮೇಲಿದ್ದ ಹಾರೋ ಹಳ್ಳಿಯಿಂದ ಸುಮಾರು ಮೂರು ಕಿಲೋ ಮೀಟರ್ ದೂರದ ಒಂದು ಹಳ್ಳಿಗೆ ನನ್ನನ್ನು ಆಕೆ ಕರೆದೊಯ್ಯುತ್ತಿದ್ದರು. ಪಟಪಟನೆ ಅರಳು ಹುರಿದಂತೆ ಮಾತು. 'ನಿಮಗೆ ತುಂಬಾ ಬಿಸಿಲಾಯ್ತೇನೊ' ನನಗಿದೆಲ್ಲಾ ರೂಢಿಯಾಗಿದೆ, ಪಾಪ ನಾವು ಹೋಗಿ ಒಂದೆರಡು ಧೈರ್ಯದ ಮಾತನ್ನು ಆ ಹುಡುಗಿಗೆ ಆಕೆಯ ತಂದೆ-ತಾಯಿಗೆ ಹೇಳಿದರೆ ಸಮಾಧಾನ ಆಗುತ್ತೆ" ಹೊಲದ ಹಾಳೆಗಳ ಮೇಲೆ ನಡೆಯುತ್ತಿದ್ದವು. ಅವರ ಮುಖ ಬೆವರಿ ನೀರಿಳಿಯುತ್ತಿತ್ತು.

ಮನೆಯೊಳಗೆ ಕಾಲಿಡುತ್ತಲೇ "ನೋಡಿ ಹುಡಿಗೀನಾ ಗಂಡ ಬಿಟ್ಟು ಹೋಗಿರೋದು ನಿಜಾನೆ, ಅದಕ್ಕೆ ತಲೆಮೇಲೆ ಕೈ ಹೊತ್ತು ಕುಳಿತರೆ ಆಗುತ್ತದೆಯೆ ? ಎಳೆ ಮಗುವನ್ನು ಅವನು ಬಂದು ತೆಗೆದುಕೊಂಡು ಹೋಗದ ಹಾಗೆ ನೋಡಿಕೊಳ್ಳಿ. ಹುಡಿಗಿಗೆ ನಾಲ್ಕು ಅಕ್ಷರ ಕಲಿಸಿದರೆ, ಅವಳ ಜೀವನ ಅವಳು ಧೈರ್ಯವಾಗಿ ಮಾಡಬಲ್ಲಳು." ಹಳ್ಳಿಯಲ್ಲಿದ್ದ ಈ ಹುಡುಗಿಯನ್ನು ಬಿಟ್ಟಿದ್ದ ಅವನು ಬೆಂಗಳೂರಿನಲ್ಲಿ ಇನ್ನೊಂದು ಹುಡಿಗಿಯನ್ನು ಮದುವೆಯಾಗಿದ್ದ. ಆಕೆ ಹಾಗೆ ಅನೇಕ ವೈರಾಗ್ಯದ ಮಾತುಗಳನ್ನಾಡಿದ್ದಳು.

ಹೆಣ್ಣು ಮಕ್ಕಳನ್ನು ಹೆತ್ತ ತಂದೆ ತಾಯಂದಿರು ತಮ್ಮ ಮಕ್ಕಳನ್ನು ಕುರಿಗಳಂತೆ ಬಲಿಕೊಡುತ್ತಾರೆ. ಆದೇ ಹೆಣ್ಣು ಮಕ್ಕಳಿಗೆ ನಾಲ್ಕಕ್ಷರ ಕಲಿಸಿದರೆ ಅವರ ಕಾಲ ಮೇಲೆ ಅವರು ನಿಂತ್ಕೊಳ್ಳುತ್ತಾರೆ. ಗಂಡಸರೆಲ್ಲಾ ಷಂಡರು ಹೆಂಗಸರ ಕುತ್ತಿಗೆಗೆ ತಾಳಿ ಕಟ್ಟೋದಕ್ಕೆ ಕೂಲಿ ಕೇಳ್ತಾರೆ. ಯಾವುದೋ ಸಭೆಯಲ್ಲಿ ಆಕೆ ಹೀಗೆ ಮಾತನಾಡಿದ್ದಳು. ಯಾವುದೇ ನಿರ್ಧಾರ ತೆಗೆದುಕೊಳ್ಳಲಾಗದೇ, ಗೊಂದಲದಿಂದ ನರಳುವ ಹುಡಿಗಿಯರೊಂದಿಗೆ ಕಡ್ಡಿ ತುಂಡು ಮಾಡಿದಂತೆ ಮಾತನಾಡುತ್ತಿದ್ದರೂ ಸ್ನೇಹಮಯಿಯಾಗಿದ್ದರು. ಸ್ವಾವಲಂಭನೆಯ ಬದುಕಿಗೆ ಬೇಕಾಗಿರುವುದು ನಿಷ್ಠುರತೆ ಎಂದು ಆಕೆ ಭಾವಿಸಿದ್ದಳು.

ಕನ್ನಡವನ್ನು ಮಲೆಯಾಳಂ ಶೈಲಿಯಲ್ಲಿ ಮಾತನಾಡುತ್ತಿದ್ದರೂ, ಸ್ಸುಲಲಿತವಾಗಿ ಮಾತನಾಡುತ್ತಾ, ಇತರರಿಗೆ ಚೈತನ್ಯದ ಚಿಲುಮೆಯಾಗಿದ್ದರು, ಅವರ ವೈಯಕ್ತಿಕ ದುರಂತ ಅವರನ್ನು ಕುಗ್ಗಿಸಿರಲಿಲ್ಲ, ಅಧೀರರನ್ನಾಗಿಸಿರಲಿಲ್ಲ. ಬದಲಾಗಿ ಅವರಲ್ಲಿ ಆತ್ಮವಿಶ್ವಾಸ ಭರವಸೆ ಹೊಸ ಬದುಕಿನ ಹಾದಿಯನ್ನು ಚೆಲ್ಲಿದ್ದವು. ಸಾಮಾನ್ಯವಾಗಿ ನೊಂದಹೆಣ್ಣು ಮಕ್ಕಳಲ್ಲಿ ಕಂಡುಬರುವ ತಮ್ಮ ದುರಂತದ ಸುತ್ತ ಗಿರಕಿ ಹೊಡೆಯುವ ಪ್ರವೃತ್ತಿ ಅವರಲ್ಲಿರಲಿಲ್ಲ.

ಹೆಂಗಸರಲ್ಲಿ ಅಪರೂಪವಾಗಿದ್ದ ವ್ಯಕ್ತಿತ್ವ ಈಕೆಗಿದ್ದುದೇ ನನಗೆ ಅವರ ಬಗೆಗಿದ್ದ ಆಕರ್ಷಣೆಗೆ ಮೂಲಕಾರಣ. ಕೈ ಜಾರಿದ ಸಮಯ ಸಿಗುವುದಿಲ್ಲವೆಂದು ಭಾವಿಸುತ್ತಿದ್ದ ಆಕೆ ಸದಾ ಪುಸ್ತಕ ಪ್ರಿಯೆ. ರಾಜಕೀಯ ಆಗುಹೋಗುಗಳನ್ನು ಓದಿ ಆಕೆ ಇತರರೊಂದಿಗೆ ಚರ್ಚಿಸುತ್ತಿದ್ದ ರೀತಿ ಕಣ್ಣಿಗೆ ಕಟ್ಟಿದಂತಿದೆ.

ಆಕೆಯ ಸಾವೊಂದು ನಿಗೂಢ–ಕಾನೂನಿನ ಚೌಕಟ್ಟಿನಲ್ಲಿ ಗೆಲ್ಲಲಾರದ ಗಂಡ, ಭಿನ್ನ ಹಾದಿಯನ್ನು ಹಿಡಿದಿದ್ದ. ಆತನೆಸೆದ ಮರಣಾಂತಿಕ ಬಲೆಯೊಳಗೆ ಸಿಸಿಲಿಯಮ್ಮ ಸುಲಭವಾಗಿ ಬಿದ್ದರು. ಕೊಳಕು ಬಟ್ಟೆ ಹಾಕಿಕೊಂಡು, ಗಡ್ಡ ಬಿಟ್ಟು, ಎಲ್ಲರ ಕಣ್ಣನಲ್ಲಿ ಕರುಣೆ ಉಕ್ಕಿ ಬರುವಂತೆ ನಟನೆ ಪ್ರಾರಂಭಿಸಿದ ಆಕೆಯ ಗಂಡ, ಆಕೆಗೆ ಕಂಡಕಂಡಲ್ಲಿ ಕಾಲಿಗೆರಗುವಂತೆ ನಟಿಸಿ ಕ್ಷಮಿಸುವಂತೆ ಯಾಚಿಸುತ್ತಿದ್ದ. "ಗಂಡನನ್ನು ಕ್ಷಮಿಸದ ಈಕೆ ಎಂತಹ ಹೆಣ್ಣು" ನೋಡಿದವರ ಕುಹಕ. ಸಿಲಿಯಮ್ಮನ ಮನಸ್ಸು ಕರೆಗ ತೊಡಗಿತ್ತು. ಆಕೆಯ ಗಂಡನ ರೊಟ್ಟಿ ಜಾರಿ ತುಪ್ಪದಲ್ಲಿ ಬಿತ್ತು. ಆಕೆ ಬಿಚ್ಚು ಮನಸ್ಸಿನಿಂದ ಗಂಡನನ್ನು ಪುನಃ ಮನೆ, ಮನ ದುಂಬಿಸಿಕೊಂಡಳು.

ಗಂಡನ ಮೋಸದ ಮಾಂತ್ರಿಕತೆಯ ಬೆನ್ನ ಹಿಂದೆ ಆಕೆ ಬಿದ್ದರು. ಆತ ಮನೆಯೊಳಗೆ ಕಾಲಿಟ್ಟಿರುವುದು ಸರ್ವನಾಶಕ್ಕೆ ಎಂಬ ಸತ್ಯ ಗೋಚರಿಸಿ ಹೋಯಿತು. ತಂದೆಯ ಆಗಮನ ಮಕ್ಕಳಲ್ಲಿ ಅಸಹನೆಯ ಬೀಜವನ್ನು ಬಿತ್ತ ತೊಡಗಿತು. ತಂದೆಯೊಂದಿಗೆ ಎಚ್ಚರಿಕೆಯಿಂದ ಇರುವಂತೆ ತಾಯಿಗೆ ಎಚ್ಚರಿಕೆಯನ್ನು ನೀಡಿದ್ದರು. ಗಂಡ ಮನೆಗೆ ಬಂದಿರುವುದನ್ನು, ಸಿಸಿಲಿಯಮ್ಮ ನಮ್ಮಬಳಿ ಹೇಳಿರಲಿಲ್ಲ. ಗಂಡನ ಬದಲಾದ ವರ್ತನೆ, ಮನೆಗೆ ಬರಲು ತೋರುತ್ತಿರುವ ಆಸಕ್ತಿ, ಮುಂತಾದುವನ್ನು ನಾನು ಸಿಕ್ಕಾಗಲೆಲ್ಲಾ ಹೇಳುತ್ತಿದ್ದರು.

ಸಾಯುವ ಮುನ್ನ, ಸುಮಾರು ಒಂದು ವಾರದ ಹಿಂದೆ, ಮುಂಜಾನೆ ಆರು ಗಂಟೆಗೆ ಬೆಂಗಳೂರಿಗೆ ಬಂದಿದ್ದರು. ದುಗುಡವನ್ನೇ ತುಂಬಿಕೊಂಡ ಆಕೆ "ಏನು ಮಾಡುವುದು ಹೇಳಿ" ಎಂದು ನನ್ನ ಎರಡೂ ಕೈಯನ್ನು ಭದ್ರವಾಗಿ ಹಿಡಿದಿದ್ದರು.

"ನೀವೇ ಆಯ್ಕೆ ಮಾಡಿಕೊಳ್ಳಬೇಕಾದವರು. ಆತ ಬದಲಾಗಿದ್ದಾನೆನ್ನುವ ಬಗ್ಗೆ ನಿಮಗೆ ಸಂಪೂರ್ಣವಾದ ಭರವಸೆ ನಿಮಗಿದ್ದರೆ, ನೀವು ಒಪ್ಪಿಕೊಳ್ಳಿ. ಆದರೆ ಇದರಿಂದ ಇನ್ನೂ ತೊಂದರೆಗೆ ಸಿಕ್ಕಿ ಹಾಕಿಕೊಳ್ಳುವುದು ಬೇಡ," ಎಂದಿದ್ದೆ. "ಇಲ್ಲ ಆತ ಸಂಪೂರ್ಣವಾಗಿ ಬದಲಾಗಿದ್ದಾನೆ. ಜೊತೆಗೆ 'ಅವಳ' ಮನೆಯವರು ಇವನನ್ನೂ ಸೇರಿಸುತ್ತಿಲ್ಲ." ಎಂದರು. ಯೋಚನೆ ಮಾಡಿ ನಿರ್ಧರಿಸಿ, ಆದರೆ ಅವಸರ ಸರಿಯಲ್ಲ ಎನ್ನುತ್ತಾ, ಬೀಳ್ಕೊಟ್ಟಿದ್ದೆ. ಆಕೆಯ ಬೆನ್ನು ಹಿಂದೆಯೇ ಆಕೆಯನ್ನು ಬಲಿ ತೆಗೆದುಕೊಳ್ಳುವ ಭೂಮಿಕೆ ಸಿದ್ಧವಾಗುತ್ತಿತ್ತು. ಆಕೆ ಹಾಸಿಗೆ ನನ್ನೊಂದಿಗೆ ಹೇಳುತ್ತಿರುವಾಗಲೇ ಆಕೆಯ ಗಂಡ ಮನೆಗೆ ಬಂದುಎರಡು ತಿಂಗಳು ಕಳೆದು ಹೋಗಿದ್ದವು. ಆಕೆ ಈ ಸಂಗತಿಯನ್ನು ಮುಚ್ಚಿಟ್ಟಿದಳು. ಅವರ ಮನಸ್ಸಿನ ತುಮುಲಗಳೇನಿದ್ದವೊ?

ಹೆರಿಗೆಯೊಂದನ್ನು ಮಾಡಿಸಿ ಹೊಸ ಜೀವಕ್ಕೆ ಸ್ವಾಗತ ನೀಡಿ ಮನೆಗೆಬಂದು ಮಲಗಿದ ಸಿಸಿಲಿಯಮ್ಮ ಮೇಲೇಳಲೇ ಇಲ್ಲ.ಸಾಕ್ಷಿ,ರುಜುಮಾತುಗಳೊಳಗಿನ ಮಾನವೀಯತೆ ಬಾಯಿ ಬಿಚ್ಚಲೇ ಇಲ್ಲ. ಸಾಕ್ಷಿ, ಕರೆತಂದ ಸಾವಿಗೆ ಸಾವಿರಾರು ನೆಪ.

ಕೊನೆಗೆ ಸಿಸಿಲಿಯಮ್ಮನಲ್ಲಿದ್ದ ಸ್ವಾಭಿಮಾನ, ಹಟ, ಛಲ, ಧೈರ್ಯ, ಆತ್ಮವಿಶ್ವಾಸ ಯಾವೂ ಆಕೆಯ ಪ್ರಾಣ ಉಳಿಸಿಕೊಳ್ಳಲು ನೆರವಾಗಲಿಲ್ಲ, ಅವೇ ಆಕೆಯ ಬದುಕಿಗೆ ಕಂಟಕ ಪ್ರಾಯವಾದವು. ಗಂಡನು ತನಗೆ ಮಾಡಿದ ಅನ್ಯಾಯವನ್ನು ಪ್ರಶ್ನಿಸದೇ, ನಿರ್ಲಕ್ಷಿಸಿ, ಆತನ ಗೊಡವೆಗೆ ಹೋಗದೆ, ಅಸಹಾಯಕ ಹೆಣ್ಣನಂತೆ ಬದುಕಿದ್ದರೆ, ಆಕೆ ಬದುಕುತ್ತಿದ್ದಳೇನೋ ? ಕನಿಷ್ಟ ಬದುಕಿರುವ ಹಕ್ಕನ್ನಾದರೂ ಉಳಿಸಿ ಕೊಳ್ಳುತ್ತಿದ್ದಳೇನೋ ?

ಆದರೆ ಬದಲಾಗುತ್ತಿರುವ ಕಾಲಮಾನ, ಇಂದಿನ ಸಾಮಾಜಿಕ ಮೌಲ್ಯಗಳ ಸಂಕ್ರಮಣ ಸ್ಥಿತಿಯಲ್ಲಿ ಹೆಣ್ಣು ಹಾಗೆ ನಿರ್ಲಕ್ಷಿಸಿ ಬದುಕಲಾರಳು. ಬದುಕ ಬೇಕಾಗಿಲ್ಲ. ಆದರೆ ಪ್ರಶ್ನಿಸುವ ಹಂತದಲ್ಲಿನ ಆಕೆಯ ಸ್ವಾಭಿಮಾನ, ಸ್ವಸಮರ್ಥನೆ 'ಆಕೆ'ಯನ್ನೇ ಇಲ್ಲ ವಾಗಿಸುತ್ತದೆ. ತನ್ನ ವ್ಯಕ್ತಿತ್ವದ ಸಮರ್ಥನೆಯ ಪ್ರಕ್ರಿಯೆಯಲ್ಲಿ 'ಆಕೆ'ಯನ್ನೇ 'ಇಲ್ಲ' ವಾಗಿಸುವಂತೆ ವ್ಯವಸ್ಥೆ ಹೊಂಚಿ ಹಾಕುತ್ತದೆ. ಇದು ಚಾರಿತ್ರಿಕ ಅನಿವಾರ್ಯವೆ ? ಚಾರಿತ್ರಿಕ ಅನಿವಾರ್ಯ ವೇಕಾಗಬೇಕು ?

ಈಕೆಯ ಸಾವಿನ ಚಿತ್ರ ಪ್ರಕಟಿಸಿದ ಸಂಜೆ ಪತ್ರಿಕೆ ಯೊಂದು ನನ್ನ ಬಳಿ ಇದೆ. ಬಣ್ಣ ಕಳೆದುಕೊಂಡ ಮಸು ಕಾದ ಆ ದಿನ ಪತ್ರಿಕೆಯಲ್ಲಿನ ಆಕೆಯ ಚಿತ್ರ ಶಿಥಿಲತೆ ಯನ್ನು ನೆನಪಿಗೆ ತರುತ್ತವೆ. ಖಿನ್ನತೆ ಪುನಃ ಟಿಸಿಯೊಡೆಯು ತ್ತದೆ. ಮನೆ, ಮಕ್ಕಳು, ಅವರ ವಿವಿಧ ಜವಾಬ್ದಾರಿ, ವೃತ್ತಿ, ನ್ಯಾಯಾಲಯಕ್ಕೆ ಅಲೆದಾಟ. ಇತರರಲ್ಲಿ ತೋರು ತ್ತಿದ್ದ ಮಾನವೀಯತೆ, ಇವುಗಳ ನಡುವಿನ ಆಕೆಯ ಬದುಕು ನಿಜವೆ ? ಅವರ ಸಾವು ನಿಜವೆ ? ಒಮ್ಮೊಮ್ಮೆ ಅವರು ಬದುಕಿದ್ದರು, ಸಾವು ಭ್ರಮೆ ಎಂದೆನಿಸುತ್ತದೆ. ಕೆಲವೊಮ್ಮೆ ಅವರ ಸಾವು ನಿಜ, ಬದುಕಿದ್ದೇ ಭ್ರಮೆ ಎಂದೆನಿಸುತ್ತದೆ.

ರಾಜೇಶ್ವರಿ ಎಚ್. ಎಸ್.

ನಾವು ಸಣ್ಣವರಿದ್ದಾಗ ನಮ್ಮ ಅಪ್ಪಂದಿರು ಯಾವಾಗಲೂ ಕಲಿಸುತ್ತಿದ್ದರು. ನಮ್ಮ ಪೂರ್ವಯುಗದಲ್ಲಿ ನಿಷ್ಠೆ ಇರಬೇಕು. ನಮ್ಮ ಸಂಸ್ಕೃತಿ, ಸಂಪ್ರದಾಯದಲ್ಲಿ ನಿಷ್ಠೆ ಇರಬೇಕು... ನೆಡುವ ಮೊದಲು ನೋವು ಮಾಡುತ್ತಿರುವುದಕ್ಕೆ ನೆಲದ ಒಪ್ಪಿಗೆ ಪಡೆಯಬೇಕು; ಅನ್ನಕ್ಕಾಗಿ ನೆಲವ ನೋಯಿಸಲು ನಮಗೆ ಹಕ್ಕುಂಟು...ಬಸುರಿ ಹೆಂಗಸರು ಮಗುವಿನೊಂದಿರುವಾಗ, ಮಗುವಿಗೆ ಹೇಳಬೇಕು, ಕಾಡಿನಲ್ಲಿ ನಡೆದಾಡುವಾಗಲೆಲ್ಲ ನೋಡಿದ್ದೆಲ್ಲವನ್ನು ಹೊತ್ತಿದ್ದೇನೆಂದು ...ನಮ್ಮ ಗುಂಪಿನಲ್ಲಿ ಬೈಬಲ್ ನಮಗೆ ಏನು ಹೇಳುತ್ತದೆ ಎಂಬುದರ ಬಗ್ಗೆ ಚಿಂತಿಸುತ್ತಿದ್ದೆವು. ಉದಾಹರಣೆಗೆ ಜೂಡಿತಳ ಕಥೆ ನನಗೆ ಬಹಳ ಪ್ರಭಾವ ಬೀರಿತ್ತು; ಜನರನ್ನು ಉಳಿಸಲು ಅವಳು ರಾಜನ ತಲೆ ಕತ್ತರಿಸಿದಳು...

ಹಳ್ಳಿಯಿಂದ ಹಳ್ಳಿಗೆ ಓಡಾಡುತ್ತಿದ್ದ ನನ್ನ ತಾಯಿ ಗೋರಿಲ್ಲಾಗಳ ಪರಿಚಯ ಬೆಳೆಸಿಕೊಂಡಳು. ಅವಳು ಬೇಡಿದ್ದೆಲ್ಲಾ ಸಾವಾಗಿತ್ತು. ಆರ್ಮಿ ಕಮಾಂಡರುಗಳು ಅವಳಿಗೆ ಬಲವಂತವಾಗಿ ಆಕೆಗೆ ಲಸಿಕೆಯನ್ನು ಚುಚ್ಚಿ, ಆಹಾರವನ್ನು ಕೊಡಲು ಆಜ್ಞೆ ಇತ್ತಿದ್ದರು. ಅವರು ಅವಳನ್ನು ಎಚ್ಚರಗೊಳಿಸಿದರು. ಅವಳು ಚೇತರಿಸಿಕೊಂಡಾಗ ಮತ್ತೆ ಕಿರುಕುಳ ನೀಡಿದರು. ಮನುಷ್ಯ ಜೀವಿಗಳು ಏನನ್ನಾದರೂ ತಡೆದುಕೊಳ್ಳಬಲ್ಲರು. ಆದರೆ ಅವರ ಪ್ರತಿರೋಧ ಶಕ್ತಿಗೂ ಮಿತಿ ಯುಂಟು. ಮತ್ತೆ ನನ್ನ ತಾಯಿಯ ಸಂಕಟ ಶುರುವಾಯಿತು. ಬಯಲಿನ ಮಧ್ಯದಲ್ಲಿದ್ದ ಮರದ ಕೆಳಗೆ ಅವಳನ್ನು ಹಾಕಿದರು. ಹುಲ್ಲಿನ ಮೇಲೆ ತಕ್ಷಣ ಮೊಟ್ಟೆಗಳನ್ನಿಡುವ ನೊಣಗಳಿಂದ ಅವಳ ಮೈಯನ್ನೆಲ್ಲ ಹುಳುವಾಗಿಸಿದರು... ಎಷ್ಟೋ ಹೊತ್ತು ಅವಳು ಹೋರಾಡಿದಳು. ಬಿಸಿಲಲ್ಲಿ, ಥಂಡಿಯಲ್ಲಿ ಸತ್ತುಹೋದಳು. ಅವಳ ಹೆಣವನ್ನು ಕೊಡ ಲಿಲ್ಲ ನಮಗೆ. ನಾಯಿಗಳು, ಹದ್ದುಗಳು ಅವಳನ್ನು ಹರಿದು ತಿನ್ನುವವರೆಗೂ ಸೈನಿಕರು ಕಾದಿದ್ದರು...ನಾವು ಅವಳ ಮಕ್ಕಳು, ನಾವು ಅವಳ ತಬ್ಬಲಿಗಳು, ಹೋರಾಟದ ಇನ್ನೊಂದು ಹಾದಿಯನ್ನೆ ಹುಡುಕಬೇಕಾಗಿದೆ.....

(ರಿಗೊಬೆರ್ಟಾ ಮೆಂಚು ಗ್ವಾಟೆಮಾಲಾದಲ್ಲಿ ಮಾನವೀಯ ಹಕ್ಕುಗಳ ಹೋರಾಟಕ್ಕಾಗಿ ಇತ್ತೀಚೆಗೆ ನೋಬೆಲ್ ಶಾಂತಿ ಪುರಸ್ಕಾರ ಪಡೆದವರು)

ಸೀಮೆಎಣ್ಣೆಯಲ್ಲಿ ಉರಿದುಹೋದ ಪುಷ್ಪ

ಪುಷ್ಪಾ, ದೊಡ್ಡಬಳ್ಳಾಪುರದ ನಿವಾಸಿ ಜಿ. ವೆಂಕಟರಾಯಪ್ಪನವರ ಪುತ್ರಿ. ಹತ್ತು ವರ್ಷಗಳ ಹಿಂದೆ ನಾಗರಾಜ ಎಂಬುವನೊಂದಿಗೆ ಈಕೆಯ ಮದುವೆಯಾಗಿತ್ತು. ನೋಡಲು ಚೆನ್ನಾಗಿದ್ದ. ಸರಕಾರಿ ನೌಕರಿಯೂ ಇತ್ತು. ಇನ್ನೇನು ಕಮ್ಮಿ? ಇಷ್ಟಿದ್ದರೆ ಮಗಳು ಸುಖವಾಗಿರುತ್ತಾಳೆಂಬ ಎಲ್ಲ ತಂದೆ ತಾಯಿಯರ ಭ್ರಮೆಯಂತೆ ವೆಂಕಟರಾಯಪ್ಪನವರೂ ತಮ್ಮ ಮಗಳನ್ನು ನಾಗರಾಜನಿಗೆ ಕೊಟ್ಟು ಮದುವೆ ಮಾಡಿದರು. ಧನ ಪಿಶಾಚಿಗಳಿಗೆ ಹೆಂಡತಿಯರನ್ನು ಗೋಳು ಹುಯ್ದುಕೊಂಡು ತಂದೆ ಮನೆಯಿಂದ ಹಣ ತರಿಸಿಕೊಳ್ಳುವುದೊಂದು ಸುಲಭ ಮಾರ್ಗ. ಈ ರೀತಿ ಹಣ ಪಡೆಯುವುದು ಅವರ ಹಕ್ಕೇ ಆಗಿಬಿಟ್ಟಿದೆ. ಹಿಂಸೆಯಲ್ಲಿ ನರಳುತ್ತಲೇ ಸವೆಯುವುದು ಹೆಣ್ಣಿಗೆ ಮಾಮೂಲಿಯಾಗಿದೆ

ಹಣಕ್ಕಾಗಿ ತಂದೆ ಮನೆಗೆ ಹೋಗೆಂದು ಹೊಡೆತ ತಿನ್ನುವುದು ಪುಷ್ಪಳಿಗೆ ಮಾಮೂಲಿಯಾಗಿತ್ತು. ತಾಳಿ ಕಟ್ಟಿಸಿಕೊಳ್ಳುವುದು ತಾಳಿಕೊಳ್ಳಲೆಂದು ಅವನ ಎಲ್ಲ ಹಿಂಸೆಯನ್ನು ಸಹಿಸಿಕೊಂಡಿದ್ದಳು. ಈ ಸಮಯದಲ್ಲಿ ಆಕೆಗೊಂದು ಹೆಣ್ಣು ಮಗುವೂ ಆಗಿತ್ತು. 1984ರಲ್ಲಿ ಅತಿಯಾದ ದೈಹಿಕಹಿಂಸೆಯಿಂದ ನರಳಿದ್ದ ಪುಷ್ಪಳನ್ನು, ಅವಳ ತಂದೆಯ ಮನೆಗೆ ತಂದು ಬಿಟ್ಟುಹೋಗಿದ್ದ ನಾಗರಾಜ. ತಂದೆ ಮನೆಯವರ ಆರೈಕೆಯಿಂದ ಆಕೆ ನಿಧಾನವಾಗಿ ಚೇತರಿಸಿಕೊಂಡಳು. ಹುಷಾರಾದ ನಂತರ ನಾಗರಾಜ ಪುಷ್ಪಳನ್ನು ಮತ್ತೆ ಬರಲು ಕರೆದ. ಆಕೆಯ ಜೀವಕ್ಕೆ ನಾಗರಾಜನಿಂದ ಅಪಾಯವಾಗುವ ಅನುಮಾನವಿದ್ದ ತಂದೆ ಮನೆಯವರು ಕಳುಹಿಸಲು ನಿರಾಕರಿಸಿದರು. ಮುಂದೆ ಅವಳನ್ನು ಹಿಂಸಿಸುವುದಿಲ್ಲವೆಂದು, ಅವಳ ಜೀವಕ್ಕೇನಾದರೂ ಅಪಾಯವಾದರೆ ತಾನೇ ಜವಾಬ್ದಾರನಾಗುತ್ತಾನೆಂದು ಪಂಚಾಯ್ತಿಯವರ ಎದುರಲ್ಲಿ ಬರೆದು ಕೊಟ್ಟು ಪುಷ್ಪಳನ್ನು ಕರೆದುಕೊಂಡು ಹೋದ. ಹೋದ ಮೇಲೂ ಹಿಂಸೆ ತಪ್ಪಲಿಲ್ಲ. ಹಿಂಸೆಯಲ್ಲೇ ವರ್ಷಗಳುರುಳಿ ಪುಷ್ಪ ಮತ್ತೆ ಎರಡು ಗಂಡುಮಕ್ಕಳ ತಾಯಿಯಾದಳು. ಮಕ್ಕಳ ಲಾಲನೆ ಪಾಲನೆಯಲ್ಲೇ ನೋವು ಮರೆಯಲು ಪ್ರಯತ್ನಿಸಿದಳು. ಅದಕ್ಕೂ ಅವಕಾಶ ಕೊಡದ ನಾಗರಾಜ ಅವಳನ್ನು ಸಂಪೂರ್ಣ ಹೊಸಕಿ ಹಾಕಿದ.

5–6–92 ರಂದು ಪುಷ್ಪ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆಗೆ ಪ್ರಯತ್ನ ಪಟ್ಟ ಕಾರಣ ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವಳೆಂಬ ಸುದ್ದಿ ಕೇಳಿ, ತಂದೆ ಮನೆಯವರು ತಕ್ಷಣ ಹೊರಟುಬಂದರು. ಬಹು ಪಾಲು ಸುಟ್ಟು ಹೋಗಿದ್ದ ಪುಷ್ಪ ಆ ದಿನ ರಾತ್ರಿಯೇ ಕೊನೆಯುಸಿರೆಳೆದಳು. ಅವಳೇ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದಳೆಂದು, ಕೂಡಲೇ ನಾನೇ ಅವಳನ್ನು ಆಸ್ಪತ್ರೆಗೆ ಸೇರಿಸಿದೆನೆಂದು ನಾಗರಾಜ ಹೇಳಿ ಕೊಟ್ಟಿದ್ದಾನೆ. ಅವನ ವರ್ತನೆಯ ಸಂಪೂರ್ಣ ಅರಿವಿದ್ದ ವೆಂಕಟರಾಯಪ್ಪ, ಮಗಳ ಸಾವಿಗೆ ನಾಗರಾಜನೇ ಹೊಣೆಯೆಂದು ಪೋಲಿಸರಿಗೆ ದೂರು ಕೊಟ್ಟಿದ್ದಾರೆ. ಎಸ್.ಎಸ್.ಎಸ್‌ಸಿ. ಫೇಲಾಗಿದ್ದ ಪುಷ್ಪ ಮತ್ತೆ ಪಾಸು ಮಾಡಿ ಕೆಲಸಕ್ಕೆ ಸೇರಿ ಜೀವನ ನಡೆಸಬೇಕೆಂದುಕೊಂಡಿದ್ದಳು, ಮಕ್ಕಳನ್ನು ಚೆನ್ನಾಗಿ ಓದಿಸಬೇಕೆಂದುಕೊಂಡಿದ್ದಳು. ಬದುಕಬೇಕೆಂಬ ಆಸೆಯಿದ್ದ ಪುಷ್ಪ ಆತ್ಮಹತ್ಯೆಯ ಬಗ್ಗೆ ಯೋಚಿಸುವವಳಲ್ಲ ಎಂದು ಅವಳ ಸಹೋದರ ವೆಂಕಟೇಶ್ ಮೂರ್ತಿ ತಿಳಿಸಿದ್ದಾರೆ. ನಾಗರಾಜನೇ ಪ್ರಜ್ಞೆ ತಪ್ಪುವಂತೆ ಹೊಡೆದು, ಸೀಮೆಎಣ್ಣೆ ಸುರಿದು ಬೆಂಕಿಹಚ್ಚಿದ್ದಾನೆಂದು ಆರೋಪಿಸಿದ್ದಾರೆ.

ಆರೋಪ ಸಾಬೀತಾಗುವ ವೇಳೆಗೆ ಇನ್ನೆಷ್ಟು ಪುಷ್ಪಂದಿರು ಬೆಂದು ಹೋಗುತ್ತಾರೋ? ನಾವು ಮಾಮೂಲಿ ಸುದ್ದಿಯಂತೆ ಪೇಪರಿನಲ್ಲಿ ಓದಿ ಸುಮ್ಮನಾಗುತ್ತೇವೆ. ಬೆಂದು ಹೋದವರು ವರದಕ್ಷಿಣೆ ಕಾರಣಕ್ಕಾಗಿ ಸತ್ತವರ ಅಂಕಿ ಅಂಶ ಸೇರಿ ಕೊನೆಯಾಗುತ್ತಾರೆ. ದುಡ್ಡಿಗಾಗಿ ಮದುವೆಯಾಗುವವರನ್ನು ಧಿಕ್ಕರಿಸುವುದನ್ನು ನಾವು ಕಲಿಯುವವರೆಗೂ, ಈ ರೀತಿಯ ಹೀನ ಕೃತ್ಯಕ್ಕೆ ನಾವು ಕಾರಣರೆಂದು ಗಂಡಸರು ನಾಚಿಕೆ ಅವಮಾನ ಪಟ್ಟುಕೊಳ್ಳುವವರೆಗೂ ಏನೂ ಬದಲಾಗದು.

ಸರಸ್ವತಿ ದು.

ನಾವೂ ಸ್ವತಂತ್ರ್ಯ ಭಾರತದ ಪ್ರಜೆಯಾಗೋಣ

ಇಂದು ದಿನವೂ ದೈಹಿಕವಾಗಿ, ಮಾನಸಿಕವಾಗಿ ದಹಿಸುತ್ತಲಿರುವ ಈ ಹೆಣ್ಣು ಎಂಬ ವಸ್ತು ಕ್ಷುಲ್ಲಕವಾಗಿ ಬಿಟ್ಟಿದೆ. ಅವಳ ವೈಯಕ್ತಿಕ ಅಭಿಪ್ರಾಯಕ್ಕೆ ಅವಳ ಭಾವನೆಗಳಿಗೆ ಬೆಲೆಯೇ ಇಲ್ಲವಾಗಿದೆ. ಪ್ರತಿಯೊಂದು ಕಾರ್ಯದಲ್ಲಿಯೂ ಹೆಣ್ಣಿನ ಕೈವಾಡ ಇದ್ದೇ ಇದೆ. ಅವಳ ಸತತ ಪ್ರೋತ್ಸಾಹದಿಂದಲೇ ಇಂದು ಪ್ರತಿಕಾರ್ಯ ನಡೆಯುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ. ಆದರೂ ಬರೀ ಅವಳೊಂದು ಭೋಗದ ವಸ್ತು ಎಂದು ತಿಳಿದಂತಿದೆ.

ಅನೇಕ ರೀತಿಯಲ್ಲಿ ಪೂಜೆಗೊಳಪಟ್ಟರೂ ನಿಜ ಜೀವನದಲ್ಲಿ ಅವಳೊಂದು ಸ್ಪ್ರಿಂಗಿನ ಬೊಂಬೆಯಂತಾಗಿದ್ದಾಳೆ. ಇತ್ತಿತ್ತಲಾಗಿ ಹೆಣ್ಣು ಹೆಣ್ಣಿಗೆ ವೈರಿಯಾಗಿ ಪರಿಣಮಿಸುತ್ತಿದ್ದಾಳೆ. ಎಷ್ಟೋ ಅತ್ತೆ, ನಾದಿನಿಯರು ಮನೆಗೆ ಬಂದ ಸೊಸೆಯನ್ನು ಆಸ್ತಿ ತಿನ್ನಲು ಬಂದ ಗಯ್ಯಾಳಿ ಎಂದೇ ಅವರೆಲ್ಲರ ಗುಮಾನಿ. ಯಾರೂ ಯಾರ ಆಸ್ತಿಗೂ ಹಕ್ಕುದಾರರಲ್ಲ. ಎಲ್ಲವೂ ಆ ಭಗವಂತನಿಗೆ ಸಲ್ಲತಕ್ಕದ್ದು. ಎಂದು ತಿಳಿದೂ ಯಾಕೀ ಕಚ್ಚಾಟ ? ಇರುವವರೆಗೆ ಎಲ್ಲರೂ ಸಹೋದರ ಸಹೋದರಿಯರು ಎಂಬ ಭಾವನೆಯ ಅಡಿಯಲ್ಲಿ ಬಾಳಿದರೆ ಎಷ್ಟು ಚನ್ನ ?

ಛೀ ! ಸ್ವಾರ್ಥಮಯ ಈ ಬದುಕಿನಲ್ಲಿ ಅಷ್ಟೊಂದು ವಿಶಾಲ ಗುಣ ಎಲ್ಲಿಂದ ಬಂದೀತು? ಹಿಂದೆ ಅನಕ್ಷರಸ್ಥಳಾಗಿ ಹೊರ ಪ್ರಪಂಚದ ಜ್ಞಾನವಿಲ್ಲದೇ, ಸಾಕು ಪ್ರಾಣಿಯಂತೆ ಯಜಮಾನನನ್ನು ಹಿಂಬಾಲಿಸುವ ಕಾಲವೊಂದಿತ್ತು. ಆದರೆ! ಹಿಂದಿನಂತೆ ಹಿಂದುಳಿದ ಸ್ತ್ರೀ ಈಗಿಲ್ಲ. ಅವಳಿಂದು ಆಧುನಿಕತೆಯನ್ನು ಗರ್ಭಧರಿಸಿ ನಿಂತಿದ್ದಾಳೆ. ಯಾರಿಗಿಂತಲೂ ನಾನು ಕಡಿಮೆ ಇಲ್ಲ ಎಂದು ಸಾಧಿಸಿ ತೋರಿಸಿದ್ದಾಳೆ. ಆರ್ಥಿಕವಾಗಿ ಕೈತುಂಬಾ ಸಾವಿರಾರು ರೂಪಾಯಿ ಸಂಬಳ ತರುವ ಅವಳು ಸಾವಿರ ಪೈಸೆ ಬಳಸಲೂ ಸ್ವತಂತ್ರಳಲ್ಲ. ಎಲ್ಲ ರೀತಿಯಿಂದಲೂ ಅವಳಿಂದು ಸ್ವತಂತ್ರಳು ಎಂದು ಎದೆ ತಟ್ಟಿ ನಿಲ್ಲುವ ಸ್ತ್ರೀ ಒಬ್ಬಳಾದರೂ ಇದ್ದಾಳೆಯೇ ?

ದುಡಿಯುವ ಎಷ್ಟೋ ಹೆಣ್ಣು ಮಕ್ಕಳಿಗೆ ತಮ್ಮ ಬ್ಯಾಂಕ್ ಖಾತೆ, ಬ್ಯಾಲೆನ್ಸ್ ಯಾವುದೊಂದೂ ತಿಳಿಯದು. ಸಮಾಜದಲ್ಲನೇಕ ಸಂಪ್ರದಾಯಗಳ ಚೌಕಟ್ಟು ನಮ್ಮನ್ನು ಕಟ್ಟಿಹಾಕಿದೆ. ಗಂಡು, ಹೆಣ್ಣು ಹೊಂದಿಕೊಂಡು "ಸಮರಸವೇ ಜೀವನ" ಎಂದು ತಿಳಿದು ನಡೆದರೆ ಆ ಮಾರ್ಗವೇ ಬೇರೆ! ಸಮಾಜದಲ್ಲಿ ತನ್ನ ಗೌರವವನ್ನು ಕಾಪಾಡಿಕೊಂಡು ಹೋಗಲು ಅವಳು ಪ್ರತಿಕ್ಷಣ ಹೆಣಗುತ್ತಾಳೆ. ಅದನ್ನೇ! ನನಗೆ ತಗ್ಗಿ, ಬಗ್ಗಿ, ಅಂಜಿ ನಡೆಯುತ್ತಾಳೆ ಎಂದು ತಿಳಿದು, ಅಹಂನಿಂದ ಮೆರೆಯುತ್ತಿರುವ ಈ ಗಂಡು ಜಾತಿಯನ್ನೇ ಮೆಟ್ಟಿ ನಿಲ್ಲಬೇಕು. ಅಂದಾಗಲೇ ಸ್ವತಂತ್ರ್ಯ ಭಾರತದಲ್ಲಿ ಹುಟ್ಟಿದ್ದು ಸಾರ್ಥಕವಾಯಿತು

ನಿಃಶಾಂತಿನಿ
ಸೂಡಿ

ಖಾಲಿತನ

ಹೇಗೊ, ಎಂತೊ
ಮೆಲ್ಲಗೆ ನುಸುಳಿದೆ
ಖಾಲೀತನ !
ಗೋಡೆಯೇಳುತ್ತಿದೆ
ಇಟ್ಟಿಗೆಯ ಮೇಲೆ
ಸಿಮೆಂಟಿನ ಜೊತೆ
ಗಟ್ಟಿಯಾಗುತ್ತ, ಕೋಟೆಯಾಗುತ್ತಿವೆ
ನೋವು, ಹತಾಶೆಯ
ಇಟ್ಟಿಗೆ, ಸಿಮೆಂಟುಗಳು
ಎಲ್ಲೋ ಎಂದೊ
ಮುಖಾಮುಖಿ
ತುಟಿ ಅರಳದು
ನಗುವೆಲ್ಲೋ
ಕೋಟೆ ಕಲ್ಲಡಿ ಅಪ್ಪಚ್ಚಿ
ಕಣ್ಣು ಬೆಳಗದು
ಪಾಪ ! ಕೋಟೆ ಕತ್ತಲ ಅಭ್ಯಾಸ
ಗೋಡೆಯ ನಡುವೆ
ಬಿರುಕಾದರು ಇದ್ದರೆ
ಕೊಂಚ ಗಾಳಿಯಾದರು
ಆಡಿರುತ್ತಿತ್ತು.
ನಡುವೆ
ಏನೇನೂ ಇಲ್ಲ
ಬರೀ ಖಾಲಿ
ತುಂಬಲು ರಂಗೋಲಿಗೆ
ಚುಕ್ಕಿಗಳಿಲ್ಲ
ಹನಿಯಲು ಕಣ್ಣೀರಿಲ್ಲ

ಸರಸ್ವತಿ ಮು.

ಹೆಣ್ಣಿನ ಮನಸ್ಸಿನ ಹಿಂದೆ....

ಈ ಭೂಮಿ, ಆಕಾಶ, ಗಾಳಿ, ಮಳೆ, ಸಿಡಿಲು ಗುಡುಗು ಮಿಂಚು, ಗಿಡ ಮರ ಇತ್ಯಾದಿ ಪ್ರಕೃತಿದತ್ತವಾದ ಎಲ್ಲವೂ ಒಬ್ಬೊಬ್ಬರಿಗೆ ಒಂದೊಂದು ರೀತಿ ಎಂಬ ಅಸಮಾನತೆಯನ್ನು ತೋರದೆ ಎಲ್ಲಾ ಮಾನವರಿಗೆ ಪ್ರಾಣಿ ಪಕ್ಷಿ, ಸಂಕುಲಗಳಿಗೂ ಸಮಾನ ರೀತಿಯಿಂದ ಮೈದಡವಿ ಉಪಚರಿಸುತ್ತವೆ. ಆದರೆ ಮನುಷ್ಯ ಮಾತ್ರರಾದ ನಾವು ಮಾತ್ರ ಗಂಡು-ಹೆಣ್ಣು, ಮೇಲು-ಕೀಳು, ಕಪ್ಪು-ಬಿಳುಪು, ಬಡವ-ಬಲ್ಲಿದ, ಹೀಗೆ ಅನೇಕ ಬೇಧಭಾವಗಳಿಂದ ನಮ್ಮ ನಮ್ಮನ್ನೇ ಕಡೆಗಣಿಸುತ್ತಾ ಬಂದಿದ್ದೇವೆ. ಆದರೆ, ಇಲ್ಲಿ ಒಂದು ಸಂಗತಿಯೆಂದರೆ, ಪ್ರಕೃತಿದತ್ತವಾಗಿ ನಡೆಯುತ್ತಿರುವ ಎಲ್ಲಾ ಸಮಾನತಾ ಕ್ರಿಯೆಗಳು ಮಾನವ ಮಾತ್ರರಲ್ಲಿ ಇಲ್ಲದಿರುವುದು ಅಂತೆಯೇ ಮಾನವ ಮಾತ್ರರಲ್ಲಿರುವ ಚಿಂತನಾ ಶಕ್ತಿ, ಬುದ್ಧಿಶಕ್ತಿ, ಪ್ರಕೃತಿಗಿಲ್ಲದಿರುವುದು ಒಂದು ವಿಪರ್ಯಾಸವೇ ಸರಿ.

ಅದೇನೆ ಇರಲಿ. ಪ್ರಕೃತಿಯ ಸಕಲ ವ್ಯಾಪಾರಗಳನ್ನು ಕಂಡು ಅನುಭವಿಸಿ ನೋವು ನಲಿವುಗಳಿಂದ ಪಾಠ ಕಲಿಯುವ ಮನುಷ್ಯ, ಪ್ರಕೃತಿ ಪಾಲಿಸುವ ಸಮಾನತಾ ತತ್ವವನ್ನು ಏಕೆ ಅನುಸರಿಸುತ್ತಿಲ್ಲವೆಂಬುದೇ ಸೋಜಿಗದ ಸಂಗತಿ. ಇದಕ್ಕೆ ವಿಜ್ಞಾನಿಗಳು ಏನು ಕಾರಣ ಕೊಡುತ್ತಾರೋ ತಿಳಿಯದು ; ಆದರೆ ನನಗನ್ನಿಸುವುದು, Survival of fittest, ಬದುಕೇ ಒಂದು ಹೋರಾಟ-ಇಲ್ಲವೆ ಬಲಿಷ್ಠರಾದವರಿಗೆ ಮಾತ್ರ ಬದುಕು ಎಂಬ ಸೂತ್ರದ ಆಧಾರದ ಮೇಲೆ ಮೇಲ್ಕಂಡ ತಾರತಮ್ಯಗಳು ಹುಟ್ಟಿಕೊಂಡಿರಬಹುದೇ ಎಂದು.

ಇಷ್ಟೆಲ್ಲ ಏಕೆ ಹೇಳಬೇಕಾಯಿತೆಂದರೆ, ನಮ್ಮ ಹೆಣ್ಣು ಮಕ್ಕಳನ್ನು, ಮೇಲ್ಕಂಡ ಯಾವ ತಾರತಮ್ಯಗಳಿಗಿಂತಲೂ ಬಡವ-ಬಲ್ಲಿದರೆನ್ನದೆ, ಜಾತಿ ವಿಜಾತಿಯೆನ್ನದೆ ಎಲ್ಲ ಸ್ತರಗಳಲ್ಲಿಯೂ ನಮ್ಮನ್ನು ಅಸ್ಪೃಶ್ಯರಂತೆ ದಲಿತರಂತೆ ನಮ್ಮ ಸಮಾಜ ನಡೆಸಿಕೊಳ್ಳುತ್ತಿರುವ ರೀತಿ ಕಂಡು ಹೇಸಿಗೆಯಾಗುತ್ತದೆ. ಹೆಣ್ಣು ಸಮಾಜದ ಎಲ್ಲ ಜಾತಿಗಳಲ್ಲಿ ಮೇಲು ಕೀಳೆನ್ನದೆ, ಬಡವ ಬಲ್ಲಿದರ ಮನೆಯಲ್ಲಿ ದೌರ್ಜನ್ಯಕ್ಕೆ ದಿನನಿತ್ಯ ಒಳಗಾಗುತ್ತಾಳೆ. ಪ್ರತಿನಿತ್ಯ ಒಮ್ಮೆಯಾದರೂ ತಾನು ಹೆಣ್ಣಾಗಿ ಹುಟ್ಟಿದ್ದಕ್ಕೆ ಮರುಗುತ್ತಾಳೆ. ಕಣ್ಣೀರು ಸುರಿಸುತ್ತಾಳೆ. ಹೆಣ್ಣಾಗಿ ಹುಟ್ಟಿದ್ದು ಜನ್ಮ ಜನ್ಮದ ಶಾಪವೆಂದು ಬಗೆದು ತನ್ನನ್ನೇ, ತನ್ನ ಹೆಣ್ತನವನ್ನೇ ಶಪಿಸುತ್ತಾಳೆ. ಇಷ್ಟಕ್ಕೆಲ್ಲ ಕಾರಣ ತಾಯಿಯೆಂದು ಕರೆದ, ಹೆಂಡತಿಯೆಂದು ಕರೆದ, ತಂಗಿಯೆಂದು, ಅಕ್ಕನೆಂದು ಕರೆದ ಪುರುಷವರ್ಗ ಅವಳಲ್ಲಿ ತನ್ನ ಬಲಿಷ್ಠ ಭಾವನೆಗಳನ್ನು ಹೇರಿ ತುಚ್ಛೀಕರಿಸಿ, ಅವಳ ದಮನಕ್ಕೆ ಕಾರಣವಾಗಿದ್ದರೂ ಪುರುಷನನ್ನು ತೆಗಳದಂತೆ ತನ್ನನ್ನೇ ಶಪಿಸಿಕೊಳ್ಳುವಂತೆ ಮಾಡಿರುವ ನಯಗಾರಿಕೆ ಎಂತಹವರನ್ನು ಆಶ್ಚರ್ಯಗೊಳಿಸದಿರದು.

ಈ ಕಪಟ ಮೋಸವನ್ನರಿಯದ ಹೆಂಗಳೆಯರು ತಮ್ಮೆಲ್ಲ ತಪ್ಪಿಗೂ ತಾವೇ ಹೊಣೆಗಾರರೆಂದು ಭಾವಿಸಿ ಆತ್ಮವಂಚನೆ ಮಾಡಿಕೊಳ್ಳುತ್ತಾ, ಬದುಕನ್ನು ದುರ್ಭರದಿಂದ ಸಾಗಿಸಿ, ಈ ಆತ್ಮವಂಚನೆಯ ಕೆಲಭಾಗವನ್ನು ತಮ್ಮ ಮುಂದಿನ ಪೀಳಿಗೆಗೂ ಅಷ್ಟಿಷ್ಟು ಹಂಚಿಹೋಗುತ್ತಾರೆ. 'ಹೆಣ್ಣಿಗೆ ಹೆಣ್ಣೇ ಶತ್ರು' ಎಂಬ ನುಡಿಯನ್ನು ಸಿನಿಮಾ ನಾಟಕಗಳು ಮತ್ತೆ ಮತ್ತೆ ತುರುಕುತ್ತವೆ. ಉದಾ : ಇತ್ತೀಚೆಗೆ ಬಂದಿರುವ 'ಹಠಮಾರಿ ಹೆಣ್ಣು ಕಿಲಾಡಿ ಗಂಡು' ಎಂಬ ಚಲನಚಿತ್ರದಲ್ಲಿ ಹೆಣ್ಣಿಗೆ ಹೆಣ್ಣೇ ಶತ್ರು ಎಂದು ಪದೇ ಪದೇ ಹೇಳಿಸಿ, ಸೀತೆ ಕಾಡಿಗೆ ಹೋಗಲು ಕೈಕೆ ಕಾರಣ, ಮಂಥರೆ ಕಾರಣ ಹಾಗೆಯೇ ಶೂರ್ಪನಖಿ ಕಾರಣ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಆದರೆ ಇದರ ಹಿಂದೆ ಎಂತಹ ಪುರುಷ ಮನಸ್ಸುಗಳು ಕೆಲಸ ಮಾಡಿವೆಯೆಂಬುದರ ಬಗ್ಗೆ ಚಕಾರವೆತ್ತುವುದಿಲ್ಲ. ಯಾವ ಚಿತ್ರದಲ್ಲಿ ಆಗಲಿ, ಸ್ವಾಭಿಮಾನಿ ಹೆಣ್ಣನ್ನು ಬಗ್ಗಿಸಿ ನಿರಭಿಮಾನಿಯಾಗಿ ಪರಿವರ್ತಿಸುವ ಕೆಟ್ಟಚಾಳಿಯ ಪರಂಪರೆಯೇ ದೃಶ್ಯ ಮಾಧ್ಯಮದ ಕಥಾ

ವಸ್ತುಗಳಾಗಿರುತ್ತವೆ. ಇದರಾಚೆಗೆ ಚಿಂತನೆಗೆ ಹಚ್ಚುವ ಸಿನಿಮಾಗಳು ನಮ್ಮಲ್ಲಿ ತೀರಾ ಕಡಿಮೆಯೆಂದೇ ಹೇಳಬೇಕು.

ಇಷ್ಟೆಲ್ಲ ಏಕೆ ಹೇಳಬೇಕಾಯಿತೆಂದರೆ ಪ್ರತಿಯೊಂದು ಹೆಣ್ಣು ತಾನು ಶಾಪಗ್ರಸ್ತೆಯಲ್ಲ ಎಂಬುದನ್ನು ಮೊದಲು ಅರಿಯಬೇಕು. ಹಾಗೆ ಅರಿತುಕೊಳ್ಳುವ ಮೂಲಕ ತನ್ನಲ್ಲಿ ಹುದುಗಿರುವ ಸುಪ್ತ ಪ್ರತಿಭೆಯ ಅಪಾರ ಚೈತನ್ಯ ಶಕ್ತಿಯ ಅರಿವನ್ನು ಪಡೆದುಕೊಳ್ಳಬೇಕು.

ಒಂದು ಹೆಣ್ಣು ಮತ್ತೊಂದು ಹೆಣ್ಣಿನ ನಿಂದನೆಗೊಳಗಾಗದಂತೆ ಅರಿವು ಮೂಡಿಸುವ ಪ್ರಯತ್ನ ಆಗಬೇಕು. ಇದು ಆಗಬೇಕಾದರೆ, ಹೆಣ್ಣಿನ ಮಾನಸಿಕ ಭಾವನೆಗಳ ಹಿನ್ನೆಲೆಯಲ್ಲಿ ಪುರುಷ ಮನಸ್ಸುಗಳು ಕೆಲಸ ಮಾಡುತ್ತವೆ ಎಂಬುದನ್ನು ಅರಿತಾಗ ಮಾತ್ರ ಸಾಧ್ಯ ? ಗೆಳತಿಯರೇ ನೀವೇನನ್ನುತ್ತೀರಿ ?

● ಲೀಲಾಂಬಿಕ
ಹೆಗ್ಗಡದೇವನಕೋಟೆ

ಯಂತ್ರ

ಮಾರಾಟಕ್ಕಿದೆ
ಯೌವ್ವನದ, ಜೀವಂತ
ಶಕ್ತಿಯುತ ಸುಂದರ
ಸುಸ್ಥಿತಿಯ ಯಂತ್ರ

ಇದು
ಅಡಿಗೆ ಮಾಡುತ್ತದೆ
ತೊಳೆಯುತ್ತದೆ
ಬಡಿಸುತ್ತದೆ
ಹಣ ಸಂಪಾದಿಸುತ್ತದೆ
ಅತಿಥಿಗಳ ರಂಜಿಸುತ್ತದೆ
ಮನೆ ಸ್ವಚ್ಛವಾಗಿಡುತ್ತದೆ
ನಿಮ್ಮನ್ನು ನಗುಮೊಗದಿಂದ ಸ್ವಾಗತಿಸುತ್ತದೆ
ರುಚಿಕರ ಖಾದ್ಯಗಳ ತಯಾರಿಸುತ್ತದೆ
ಹಾಸಿಗೆಯ ಅಗತ್ಯಗಳ ಪೂರೈಸುತ್ತದೆ
ನಮ್ಮ ವಂಶ ಬೆಳೆಸುತ್ತದೆ

ಒಂದು ವೇಳೆ ಕೆಟ್ಟಿತು ಎನ್ನಿ
ಆಗ ಕೇವಲ ಬಡಬಡಿಸುತ್ತದೆ
ಕೆನ್ನೆಗೊಂದು ಬಾರಿಸಿ
ತಾನೇತಾನಾಗಿ ನೆಟ್ಟಗಾಗುತ್ತದೆ

ಇದರ ನಿರ್ವಹಣೆಗೆ
ಪ್ರತಿದಿನದ ಆಹಾರ ಸಾಕು
ಜೊತೆಗೇ ಸಿಗುತ್ತದೆ
ಐವತ್ತು ಸಾವಿರ

ತ್ವರೆ ಮಾಡಿ
ಇಂದೇ ಕೊಳ್ಳಿರಿ

—ನೆಂ. ವನಜ
ಮೂಲ : ಅಶ್ವಿನಿ ಧೋಂಗ್ಡೆ

ಪ್ರಿಯರೇ,

ಏರುತ್ತಿರುವ ಬೆಲೆಗಳಲ್ಲಿ 'ಮಾನಸ'ದಂತಹ ಪತ್ರಿಕೆ ನಿಮ್ಮ ಸಹಕಾರ–ಸಲಹೆಗಳಿಂದಲೇ ನಡೆಯುವುದು ಅನಿವಾರ್ಯ. ಓದುಗರು ದಯವಿಟ್ಟು ತಮ್ಮ ಚಂದಾ ನವೀಕರಿಸಬೇಕು. ಆಜೀವ ಚಂದಾದಾರರಾಗುವ ಮೂಲಕ ಪತ್ರಿಕೆಯ ಬೆಳವಣಿಗೆಗೆ/ಅಭಿವೃದ್ಧಿಗೆ ಸಹಕರಿಸಿ.

—ಸಂಪಾದಕೀಯ ಮಂಡಳಿ

REGD. NO. KRNA 271

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ, ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ.

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ.

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ.

ವಿಳಾಸ :
"ಮಾನಸ"
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067